ಸಭೆಯು ಪುನಃ 12 ಗಂಟೆ 35 ನಿಮಿಷಕ್ಕೆ ಸಮಾವೇಶಗೊಂಡಿತು

ಮಾನ್ಯ ಉಪಾಧ್ಯಕ್ಷರು ಅಧ್ಯಕ್ಷ ಪೀಠವನ್ನಲಂಕರಿಸಿದರು

ಉಪಾಧ್ಯಕ್ಷರು: ಈಗ ಕಾರ್ಯದರ್ಶಿಯವರ ವರದಿ.

ಕಾರ್ಯದರ್ಶಿಯವರ ವರದಿ

ಅಪರ ಕಾರ್ಯದರ್ಶಿ (ವಿಧಾನಸಭೆ ಸಚಿವಾಲಯ): ಘನತೆವೆತ್ತ ರಾಜ್ಯಪಾಲರು ಮಾಡಿದ ಭಾಷಣದ ಪ್ರತಿಯನ್ನು ಸಭೆಯಲ್ಲಿ ಮಂಡಿಸುತ್ತೇನೆ.

ಸನ್ಮಾನ್ಯ ಸಭಾಪತಿಯವರೇ, ಸನ್ಮಾನ್ಯ ಸಭಾಧ್ಯಕ್ಷರೇ ಮತ್ತು ಸನ್ಮಾನ್ಯ ಸದಸ್ಯರೇ,

ಕರ್ನಾಟಕ ವಿಧಾನ ಮಂಡಲದ ಜಂಟಿ ಅಧಿವೇಶನಕ್ಕೆ ನಿಮ್ಮೆಲ್ಲರನ್ನು ಸ್ವಾಗತಿಸಲು ನನಗೆ ತುಂಬ ಸಂತೋಷವಾಗುತ್ತಿದೆ. ಕೆಲವು ಅತೀ ಮಹತ್ವದ ಘಟನೆಗಳಿಗೆ ಸಾಕ್ಷಿಯಾದ ಕಳೆದ ವರ್ಷ ಇದೀಗ ಮುಗಿದಿದೆ. ಕರ್ನಾಟಕದ ಜನತೆಗೆ ಉತ್ತಮವಾದ ಹಾಗೂ ಹೆಚ್ಚು ಸ್ಪಂದನಶೀಲವಾದ ಆಡಳಿತವನ್ನು ನೀಡುವ ದೃಢಸಂಕಲ್ಪದೊಂದಿಗೆ ನಾವು ಹೊಸ ವರ್ಷದಲ್ಲಿ ಮುಂದಡಿ ಇಡಬೇಕಾಗಿದೆ. ಇದೇ ಮೊದಲ ಬಾರಿಗೆ ರಾಜ್ಯ ವಿಧಾನ ಮಂಡಲದ ಅಧಿವೇಶನವನ್ನು ಬೆಳಗಾವಿಯಲ್ಲಿ ನಡೆಸಿದ್ದು ನನ್ನ ಸರ್ಕಾರದ ಪಾಲಿಗೆ ಒಂದು ಹೆಮ್ಮೆಯ ಸಂಗತಿಯಾಗಿದೆ. ಇದೊಂದು ಐತಿಹಾಸಿಕ ಅಧಿವೇಶನ, ಕನ್ನಡಿಗರ ಬಹುದಿನಗಳ ಬೇಡಿಕೆ ಈಡೇರಿಸಿದ ಹೆಗ್ಗಳಿಕೆ. ಪ್ರತಿವರ್ಷ ಬೆಳಗಾವಿಯಲ್ಲಿ ಒಂದು ಅಧಿವೇಶನ ನಡೆಸಲು ನನ್ನ ಸರ್ಕಾರ ಬದ್ಧ. ಸುವರ್ಣ ಕರ್ನಾಟಕ ಪ್ರಾರಂಭೋತ್ಸವ ಸಮಾರಂಭವನ್ನು ಅತ್ಯಂತ ವೈಭವದಿಂದ ಜನ ಮೆಚ್ಚುವಂತೆ ನಡೆಸಲಾಯಿತು. ಈ ವರ್ಷದ ಫೆಬ್ರವರಿ 23, 24 ಮತ್ತು 25ರಂದು ಬೆಳಗಾವಿಯಲ್ಲಿ ವಿಶ್ವ ಕನ್ನಡ ಸಮ್ಮೇಳನವನ್ನು ನಡೆಸಲು ಭರದಿಂದ ಸಿದ್ಧತೆಗಳಾಗುತ್ತಿವೆ. ವಿಶ್ವದಾದ್ಯಂತ ನೆಲೆಸಿರುವ ಕನ್ನಡಿಗರು ಭಾಗವಹಿಸಲು ಆಹ್ವಾನಿಸುತ್ತೇವೆ.

2. ಕಳೆದ ಒಂದು ವರ್ಷದಲ್ಲಿ ಜನಮಾನಸದಲ್ಲಿ, ಜನಸಾಮಾನ್ಯರ ಸರ್ಕಾರ ಎಂಬುದನ್ನು ದೃಢಪಡಿಸುವಲ್ಲಿ ನನ್ನ ಸರ್ಕಾರ ಯಶಸ್ವಿಯಾಗಿದೆ.

3. ಜನಸಾಮಾನ್ಯರ ಸಮಸ್ಯೆಗಳಿಗೆ ಧ್ವನಿಯಾಗಿ ರೂಪುಗೊಂಡ ಹಲವಾರು ಯೋಜನೆಗಳು ಯಶಸ್ವಿಯಾಗಿ ಅನುಷ್ಠಾನಗೊಂಡಿದೆ. ಶೇಕಡಾ 4 ದರದಲ್ಲಿ ಕೃಷಿಕರಿಗೆ ಸಾಲ, ಗ್ರಾಮೀಣಾಭಿವೃದ್ಧಿಗಾಗಿ ರೂಪಿಸಲಾಗಿರುವ ಸುವರ್ಣ ಗ್ರಾಮ ಯೋಜನೆ, ಹೆಣ್ಣುಮಕ್ಕಳ ಕಲ್ಯಾಣಕ್ಕಾಗಿ ಭಾಗ್ಯಲಕ್ಷ್ಮೀ ಯೋಜನೆ, ಹೆಣ್ಣುಮಕ್ಕಳ ಶಿಕ್ಷಣಕ್ಕೆ ಪ್ರೋತ್ಸಾಹಿಸಲು ಉಚಿತ ಬೈಸಿಕಲ್ ಯೋಜನೆ, 500 ಪ್ರೌಢಶಾಲೆಗಳ ಹಾಗೂ 200 ಪದವಿ ಪೂರ್ವ ಕಾಲೇಜುಗಳ ಸ್ಥಾಪನೆ, ಬಿತ್ತನೆ ಬೀಜಕ್ಕೆ ಸಬ್ಸಿಡಿ,

ಸಹಕಾರಿ ಸಕ್ಕರೆ ಕಾರ್ಖಾನೆಗಳಿಗೆ ಕಾಯಕಲ್ಪ, ಈರುಳ್ಳಿ, ಕೊಬ್ಬರಿ, ಟೊಮೆಟೊ ಮುಂತಾದ ಬೆಳೆಗಳಿಗೆ ಬೆಂಬಲ ಬೆಲೆ ಮತ್ತು ಮಾರುಕಟ್ಟೆ ಮಧ್ಯ ಪ್ರವೇಶ ಇತ್ಯಾದಿ ಕಾರ್ಯಕ್ರಮಗಳು ಇಚ್ಛಿತ ಪರಿಣಾಮ ಬೀರಿವೆ.

4. ಬೆಂಗಳೂರು ಹಾಗೂ ರಾಜ್ಯದ ಇತರ ಪ್ರಮುಖ ನಗರಗಳ ಸಮಸ್ಯೆಗಳಿಗೆ ರಾಜ್ಯ ಸರ್ಕಾರ ಪರಿಹಾರ ದೊರಕಿಸಲು ನಡೆಸಿರುವ ಪ್ರಯತ್ನ ಅಭಿನಂದನಾರ್ಹ. ಬೃಹತ್ ಬೆಂಗಳೂರು ಕಲ್ಪನೆಗೆ ಮೂರ್ತರೂಪಕೊಟ್ಟ ಕೀರ್ತಿ ನನ್ನ ಸರ್ಕಾರದ್ದು. ಮೆಟ್ರೋ ರೈಲು ಹಾಗೂ ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣಗಳ ಕಾಮಗಾರಿ ಚುರುಕುಗೊಂಡಿರುವುದು ನನಗೆ ಸಂತಸ ತಂದಿದೆ. ದುರ್ಬಲರ ವಸತಿ ಸಮಸ್ಯೆಗೆ ವಿದಾಯ ಹಾಡಲು ಆರು ಲಕ್ಷ ಮನೆಗಳನ್ನು ನಿರ್ಮಿಸಲು ಆರಂಭಗೊಂಡಿರುವ ಕಾಮಗಾರಿ ಆದಷ್ಟು ಬೇಗ ಪೂರ್ಣಗೊಳ್ಳಲಿದೆ ಎಂಬ ವಿಶ್ವಾಸ ನನ್ನದು. ರಾಜ್ಯದ ಎಲ್ಲಾ ವಸತಿಹೀನರಿಗೆ ಸೂರು ಕೊಡಲು ನನ್ನ ಸರ್ಕಾರ ಬದ್ಧವಾಗಿದೆ.

5. ರಾಜ್ಯದ ಆರ್ಥಿಕ ಪರಿಸ್ಥಿತಿ ಹಾಗೂ ಹಣಕಾಸಿನ ನೀತಿಗಳು ಆರ್ಥಿಕ ಬೆಳವಣಿಗೆಯನ್ನು ನಿರ್ದಿಷ್ಟಪಡಿಸುವಲ್ಲಿ ಪ್ರಮುಖ ಪಾತ್ರವನ್ನು ವಹಿಸಿರುತ್ತವೆ ಮತ್ತು ರಾಜ್ಯದ ಆರ್ಥಿಕ ಸ್ಥಿತಿಯು ಬಹಳಷ್ಟು ಸುಧಾರಿಸಿದ್ದು, ಈ ದಿಸೆಯಲ್ಲಿ ರಾಜ್ಯವು ಭಾರತದ ಮುಂಚೂಣಿಯಲ್ಲಿರುತ್ತದೆ. ಕರ್ನಾಟಕದ ವಿತ್ತೀಯ ಸುಧಾರಣಾ ಕ್ರಮಗಳನ್ನು ಅನೇಕ ಸಂಘ ಸಂಸ್ಥೆಗಳು ಪ್ರಶಂಸಿವೆ. ಭಾರತೀಯ ರಿಸರ್ವ ಬ್ಯಾಂಕ್ ತನ್ನ ವರದಿಯಲ್ಲಿ ರಾಜ್ಯವು ಕೈಗೊಂಡಿರುವ ವಿತ್ತೀಯ ಸುಧಾರಣಾ ಕ್ರಮಗಳನ್ನು ಶ್ಲಾಘಿಸಿರುತ್ತದೆ. ಕೇಂದ್ರ ಯೋಜನಾ ಆಯೋಗವೂ ಈ ಬಗ್ಗೆ ತನ್ನ ಪ್ರಶಂಸೆಯನ್ನು ವ್ಯಕ್ತಪಡಿಸಿರುತ್ತದೆ. ಇದೂ ಅಲ್ಲದೆ CRISIL ಸಂಸ್ಥೆಯು ಆರ್ಥಿಕ ಪ್ರಗತಿಯನ್ನು ಸಾಧಿಸಿರುವ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯಕ್ಕೆ AA – ಶ್ರೇಣಿಯನ್ನು ನೀಡಿದೆ. ರಾಜ್ಯವು ತನ್ನ ಆರ್ಥಿಕ ಹೊಣೆಗಾರಿಕೆ ಅಧಿನಿಯಮದಲ್ಲಿ ವಿಧಿಸಿರುವಂತೆ ತನ್ನ ಆರ್ಥಿಕ ಕೊರತೆಯನ್ನು ರಾಜ್ಯದ ಒಟ್ಟು ದೇಶೀಯ ಉತ್ಪನ್ನದ ಶೇ. 3ಕ್ಕಿಂತಲೂ ಕಡಿಮೆ ಮಟ್ಟದಲ್ಲಿ ಉಳಿಸಿಕೊಂಡು ಬರಲು ಬದ್ಧವಾಗಿದೆ. ಉತ್ತಮ ತೆರಿಗೆ ಆಡಳಿತ, ಮಾಹಿತಿ ತಂತ್ರಜ್ಞಾನದ ವ್ಯಾಪಕ ಉಪಯೋಗ ಹಾಗೂ ಅಗತ್ಯವಿದ್ದ ಕಡೆ ಸಮನ್ವಯ ಇವುಗಳ ಮೂಲಕ ತೆರಿಗೆ ಆದಾಯವನ್ನು ಹೆಚ್ಚಿಸಲು ಉದ್ದೇಶಿಸಲಾಗಿದೆ.

6. ಕೃಷಿ ಕ್ಷೇತ್ರ ಸುಧಾರಣೆಗೆ ನನ್ನ ಸರ್ಕಾರ ಕೈಗೊಂಡ ಕ್ರಮಗಳು ಅಭೂತಪೂರ್ವ ಎನಿಸುವಂತಹವು. ನನ್ನ ಸರ್ಕಾರವು ಹೊಸ ಕೃಷಿ

ನೀತಿಯನ್ನು ಪ್ರಕಟಿಸಿದೆ. ಕೃಷಿಕರ ಬಾಳು ಹಸನಾಗಿಸಲು ಅನುಷ್ಠಾನಕ್ಕೆ ತಂದಿರುವ ಕೃಷಿ ನೀತಿ ಪರಣಾಮಕಾರಿಯಾಗಿ ಕಾರ್ಯರೂಪಕ್ಕೆ ಬಂದಲ್ಲಿ ರೈತರ ಬಹುತೇಕ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಸಿಗುತ್ತದೆ ಎನ್ನುವ ವಿಶ್ವಾಸ ನನ್ನದು.

7. ರೈತರ ಆತ್ಮಹತ್ಯೆಯ ಪ್ರಕರಣಗಳು ಅಲ್ಲಲ್ಲಿ ವರದಿಯಾಗುತ್ತಿರುವುದನ್ನು ನನ್ನ ಸರ್ಕಾರ ಗಂಭೀರವಾಗಿ ಪರಿಗಣಿಸಿದೆ. ರೈತರ ಹಿತರಕ್ಷಣೆಯನ್ನೇ ಮೂಲ ಮಂತ್ರವಾಗಿಸಿಕೊಂಡ ನನ್ನ ಸರ್ಕಾರ ರೈತರ ಆಶೋತ್ತರಗಳನ್ನು ಈಡೇರಿಸಲು ಕಂಕಣಬದ್ಧವಾಗಿದೆ. ಯಾವುದೇ ಕಾರಣಕ್ಕೂ ಆತ್ಮಹತ್ಯೆಯಂತಹ ಘಾತಕ ಕ್ರಮಗಳಿಗೆ ರೈತರು ಶರಣಾಗಬಾರದು ಎಂದು ಮನವಿ ಮಾಡುತ್ತೇನೆ.

8. ರೈತರ ಆತ್ಮಹತ್ಯೆ ಪ್ರಕರಣಗಳು ಹೆಚ್ಚಾಗಿ ವರದಿಯಾಗಿರುವ ರಾಜ್ಯದ ಆರು ಜಿಲ್ಲೆಗಳಿಗೆ ಎಂದರೆ, ಬೆಳಗಾವಿ, ಹಾಸನ, ಚಿಕ್ಕಮಗಳೂರು, ಚಿತ್ರದುರ್ಗ, ಶಿವಮೊಗ್ಗ, ಕೊಡಗು ಜಿಲ್ಲೆಗಳಿಗೆ ಭಾರತ ಸರ್ಕಾರವು ವಿಶೇಷ ಪ್ಯಾಕೇಜನ್ನು ಪ್ರಕಟಿಸಿದೆ. ಪ್ಯಾಕೇಜಿನ ಒಟ್ಟು ಮೊತ್ತ 2689.64 ಕೋಟಿ ರೂಪಾಯಿಗಳಾಗಿದೆ. ಆ ಪೈಕಿ 1568.07 ಕೋಟಿ ರೂಪಾಯಿಗಳಷ್ಟು ಹಣ ಸಬ್ಸಿಡಿ / ಅನುದಾನ ರೂಪದಲ್ಲಿ ಮತ್ತು 1121.57 ಕೋಟಿ ರೂ.ಗಳಷ್ಟು ಹಣ ಸಾಲದ ರೂಪದಲ್ಲಿ ಬರುತ್ತದೆ. ರಾಜ್ಯ ಸರ್ಕಾರ ಈ ವಿಶೇಷ ಪ್ಯಾಕೇಜಿನ ಅನುಷ್ಠಾನದ ಮೇಲ್ವಿಚಾರಣೆಗಾಗಿ ಸಚಿವ ಸಂಪುಟ ಉಪಸಮಿತಿಯನ್ನು ರಚಿಸಿದೆ.

9. ಬೆಂಗಳೂರಿನ ಭೂ ಕಬಳಿಕೆಯ ಹಿನ್ನೆಲೆಯಲ್ಲಿ ಬರುವ ಹಣ ಹಾಗೂ ಇತರೆ ಸಂಪನ್ಮೂಲಗಳ ಕ್ರೋಢೀಕರಣದಿಂದ ರೈತರು ಸಹಕಾರಿ ಸಂಸ್ಥೆಗಳಲ್ಲಿ ಪಡೆದಿರುವ ಸಾಲವನ್ನು ಮನ್ನಾ ಮಾಡುವ ವಿಚಾರದಲ್ಲಿ ನನ್ನ ಸರ್ಕಾರ ಚಿಂತನೆ ನಡೆಸುತ್ತಿದೆ. ಯಾವ ವರ್ಗದ ರೈತರಿಗೆ ಎಷ್ಟು ಪ್ರಮಾಣದಲ್ಲಿ ಸಾಲ ಮನ್ನಾ ಮಾಡಬೇಕು ಎಂಬ ವಿಚಾರದಲ್ಲಿ ಸಮಗ್ರ ಅಧ್ಯಯನ ನಡೆಸುತ್ತಿದೆ.

10. ಸಾರಾಯಿ ಸೇವನೆ ನಮ್ಮ ಜನಗಳಿಗೆ ಮಾರಕವಾಗಿದೆ. ಕೌಟುಂಬಿಕ ಸ್ವಾಸ್ಥ್ಯ ಹಾಳಾಗುವುದರ ಜೊತೆಗೆ, ಅನೇಕರು ಬೀದಿಪಾಲಾಗಿರುವುದನ್ನು ಈ ನನ್ನ ಸರ್ಕಾರ ಗಮನಿಸಿ ಮುಂಬರುವ ದಿನಗಳಲ್ಲಿ ಸಾರಾಯಿ ನಿಷೇಧ ಮಾಡಲು ಗಂಭೀರವಾಗಿ ಚಿಂತಿಸುತ್ತಿದೆ ಮತ್ತು ಬದ್ಧವಾಗಿದೆ.

11. ಈಗಾಗಲೇ ನಾನು ತಿಳಿಸಿರುವಂತೆ ನನ್ನ ಸರ್ಕಾರವು 2006–07ನೇ ಸಾಲಿನಲ್ಲಿ ಪ್ರಪ್ರಥಮ ಬಾರಿಗೆ ಶೇಕಡಾ 75ರ ಸಬ್ಸಿಡಿ ದರದಲ್ಲಿ ಬೀಜಗಳನ್ನು ಸರಬರಾಜು ಮಾಡಿದೆ. ತಮ್ಮ ಕೃಷಿ ಉತ್ಪನ್ನಗಳನ್ನು ಕಟ್ಟ ಕಡೆಯ ಬಳಕೆದಾರರಿಗೆ

ನೇರವಾಗಿ ಮಾರಾಟ ಮಾಡಲು ರೈತರಿಗೆ ನೆರವಾಗುವ ಸಲುವಾಗಿ ಸರ್ಕಾರ ಒಂದು ಶಾಸನವನ್ನು ಸಹಾ ರಚಿಸುತ್ತಿದೆ.

12. ನನ್ನ ಸರ್ಕಾರವು ಕೃಷಿ ವಿಜ್ಞಾನ ವಿಶ್ವವಿದ್ಯಾಲಯ, ಬೆಂಗಳೂರು ಇದರ ಅಡಿಯಲ್ಲಿ ಹಾಸನದಲ್ಲಿ ಒಂದು ಕೃಷಿ ಕಾಲೇಜನ್ನು ಸ್ಥಾಪಿಸಿ, ಕಾರ್ಯನಿರ್ವಹಿಸುವಂತೆ ಮಾಡಿದೆ. ಇದರಿಂದ ಮಲೆನಾಡು ಪ್ರದೇಶದ ಬಹುದಿನದ ಬೇಡಿಕೆಯನ್ನು ಈಡೇರಿಸಿದಂತಾಗಿದೆ. ಶಿವಮೊಗ್ಗಕ್ಕೆ ಒಂದು ಪಶುವೈದ್ಯ ಕಾಲೇಜನ್ನು ಮಂಜೂರು ಮಾಡಲಾಗಿದೆ.

13. ತೋಟಗಾರಿಕೆಗೆ ಇರುವ ಪ್ರಾಮುಖ್ಯತೆಯನ್ನು ಪರಿಗಣಿಸಿ, 52.00 ಕೋಟಿ ರೂ.ಗಳಷ್ಟು ಅತ್ಯಲ್ಪವಿದ್ದ ಯೋಜನಾ ಹಂಚಿಕೆಯನ್ನು 2006–07ನೇ ಸಾಲಿನಲ್ಲಿ 300 ಕೋಟಿ ರೂ.ಗಳಿಗೆ ಹೆಚ್ಚಿಸಲಾಗಿದೆ. ನಾವು ರಾಜ್ಯದ ಉದ್ಯಾನವನ ನೀತಿಯನ್ನು ಜಾರಿಗೊಳಿಸಿದ್ದೇವೆ. ಇದರ ಅಡಿಯಲ್ಲಿ ಸುವರ್ಣ ಕರ್ನಾಟಕ ಉದ್ಯಾನವನಗಳ ಪ್ರತಿಷ್ಠಾನವನ್ನು ಸ್ಥಾಪಿಸಲಾಗಿದ್ದು ಸರ್ಕಾರಕ್ಕೆ ಸೇರಿರುವ ರಾಜ್ಯದಲ್ಲಿನ ಎಲ್ಲಾ ಉದ್ಯಾನವನಗಳನ್ನು ಇದರ ವ್ಯಾಪ್ತಿಗೆ ತರಲಾಗಿದೆ. ಉತ್ತಮ ಗುಣಮಟ್ಟದ ತೋಟಗಾರಿಕೆ ಬೆಳೆಗಳನ್ನು ರಫ್ತು ಮಾಡಲು ನನ್ನ ಸರ್ಕಾರ ಎಲ್ಲಾ ಕ್ರಮಗಳನ್ನು ಕೈಗೊಳ್ಳುತ್ತದೆ.

14. ಮರಣ/ಕಾಯಂ ಅಂಗವಿಕಲತೆ ಉಂಟಾದ ಸಂದರ್ಭದಲ್ಲಿ ಮೀನುಗಾರರಿಗೆ / ಅವರ ಅವಲಂಬಿತರಿಗೆ ಪರಿಹಾರ ನೀಡುವ ಸಲುವಾಗಿ ಸಂಕಷ್ಟ ಪರಿಹಾರ ನಿಧಿಯಿಂದ ಒದಗಿಸಲಾಗುವ ಪರಿಹಾರದ ಮೊತ್ತವನ್ನು ಒಬ್ಬರಿಗೆ 25,000 ರೂಪಾಯಿಗಳಿಂದ 50,000/– ರೂಪಾಯಿಗಳಿಗೆ ಹೆಚ್ಚಿಸಲಾಗಿದೆ. 2006–07ನೇ ಸಾಲಿನಲ್ಲಿ 102 ಮೀನುಗಾರರಿಗೆ ಪರಿಹಾರವಾಗಿ 13.48 ಲಕ್ಷ ರೂಪಾಯಿಗಳನ್ನು ವಿತರಿಸಲಾಗಿದೆ. ಅವರಿಗೆ ನೀಡಲಾಗುವ ಬಡ್ಡಿ ವಿನಾಯಿತಿಯನ್ನು 2006ರ ಆಗಸ್ಟ್‌ವರೆಗೆ ವಿಸ್ತರಿಸಲಾಗಿದೆ. ಮೀನುಗಾರಿಕೆಯಲ್ಲಿ ತೊಡಗಿರುವ ಮಹಿಳೆಯರಿಗೆ ಸ್ವಾವಲಂಬನ ಯೋಜನೆಯ ಮೂಲಕ ಶೇಕಡಾ 4ರ ದರದಲ್ಲಿ ಬಡ್ಡಿ ಆಕರಣೆಯೊಂದಿಗೆ ಸಾಲ ಕೊಡುವ ಯೋಜನೆ ಒಂದು ಉತ್ತಮ ಹಾಗೂ ಜನಪ್ರಿಯ ಯೋಜನೆಯಾಗಿದೆ.

15. 2006–07ರಲ್ಲಿ ರಾಜ್ಯವು ತೀವ್ರ ಸ್ವರೂಪದ ಪ್ರವಾಹ ಹಾಗೂ ಬರಗಾಲ ಪರಿಸ್ಥಿತಿಯನ್ನು ಎದುರಿಸಿತು. ರಾಜ್ಯ ಸರ್ಕಾರ ಹಾಗೂ ಜಿಲ್ಲಾ ಆಡಳಿತದ ಸಕಾಲಿಕ ಕ್ರಮದಿಂದಾಗಿ ಪರಿಣಾಮಕಾರಿಯಾದ ಪರಿಹಾರ ಮತ್ತು ರಕ್ಷಣಾ ಕ್ರಮಗಳನ್ನು ಕೈಗೊಳ್ಳಲು ಸಾಧ್ಯವಾಯಿತು. ಆದರೆ, 8 ಪ್ರವಾಹಪೀಡಿತ

ಜಿಲ್ಲೆಗಳಲ್ಲಿ ಆಸ್ತಿಪಾಸ್ತಿಗಳಿಗೆ ಹಾಗೂ ಬೆಳೆದು ನಿಂತಿದ್ದ ಬೆಳೆಗಳಿಗೆ ಅಪಾರವಾದ ಹಾನಿ ಉಂಟಾಯಿತು. ಇದರಿಂದಾಗಿ 817 ಗ್ರಾಮಗಳು ಮತ್ತು 1212403 ಜನರು ತೊಂದರೆಗೊಳಗಾದರು. 127514 ಜನರನ್ನು ಸ್ಥಳಾಂತರಿಸಲಾಯಿತು. ನನ್ನ ಸರ್ಕಾರವು ಸದಾ ನೆರೆ ಹಾವಳಿಗೆ ತುತ್ತಾಗುವಂಥ ಕೆಲವು ಪ್ರದೇಶಗಳಲ್ಲಿ ಕಾಯಂ ಪುನರ್ವಸತಿ ಕಲ್ಪಿಸಲು ನಿರ್ಧರಿಸಿದೆ. ಇದೇ ಮೊದಲ ಬಾರಿಗೆ 6 ಜಿಲ್ಲೆಗಳಲ್ಲಿ (ಬೆಳಗಾವಿ, ಬಿಜಾಪುರ, ಬಾಗಲಕೋಟೆ, ರಾಯಚೂರು, ಕೊಪ್ಪಳ ಹಾಗೂ ಗುಲ್ಬರ್ಗಾ) 90 ಗ್ರಾಮಗಳನ್ನು ಖಾಯಂ ಆಗಿ ಸ್ಥಳಾಂತರಿಸಲಾಗುತ್ತಿದ್ದು ಈ ಉದ್ದೇಶಕ್ಕಾಗಿ ಭೂ ಸ್ವಾಧೀನ ಮಾಡಿಕೊಳ್ಳಲು 23 ಕೋಟಿ ರೂ.ಗಳನ್ನು ಈಗಾಗಲೇ ಬಿಡುಗಡೆ ಮಾಡಲಾಗಿದೆ.

16. ಇಡೀ ರಾಜ್ಯದಲ್ಲಿ ತಲೆದೋರಿರುವ ತೀವ್ರ ಸ್ವರೂಪದ ಬರ ಪರಿಸ್ಥಿತಿಯಿಂದಾಗಿ, 128 ತಾಲ್ಲೂಕುಗಳನ್ನು ಬರಪೀಡಿತ ತಾಲ್ಲೂಕುಗಳಾಗಿ ಘೋಷಿಸಲಾಗಿದೆ. 25.72 ಲಕ್ಷ ಹೆಕ್ಟೇರ್‌ಗಳಲ್ಲಿನ ಮುಂಗಾರು ಬೆಳೆಗಳಿಗೆ ಮತ್ತು 5.06 ಲಕ್ಷ ಹೆಕ್ಟೇರ್‌ಗಳಲ್ಲಿನ ಹಿಂಗಾರು ಬೆಳೆಗೆ ಹಾನಿಯಾಯಿತು. ಪ್ರವಾಹ ಮತ್ತು ಬರ ಈ ಎರಡೂ ವಿಪತ್ತುಗಳನ್ನು ನಿಭಾಯಿಸಲು, ನನ್ನ ಸರ್ಕಾರವು ಸಾಕಷ್ಟು ಹಣವನ್ನು ಬಿಡುಗಡೆ ಮಾಡಿದೆ. ಹಾಗೂ ಸಂಕಷ್ಟವನ್ನು ನಿವಾರಿಸಲು ಕೇಂದ್ರ ಸರ್ಕಾರಕ್ಕೆ ಮನವಿಯನ್ನು ಸಲ್ಲಿಸಲಾಗಿದೆ. ಭಾರತ ಸರ್ಕಾರ ಈಗಾಗಲೇ ರೂ. 250 ಕೋಟಿ ಹಣವನ್ನು ಮತ್ತು 50,000 ಮೆಟ್ರಿಕ್ ಟನ್ ಆಹಾರ ಧಾನ್ಯವನ್ನು ಬಿಡುಗಡೆ ಮಾಡಿದೆ.

17. ಧಾರ್ಮಿಕದತ್ತಿ ಇಲಾಖೆಯಿಂದ ಎಲ್ಲಾ ವರ್ಗದ ಜಾತಿಯ, ಜನಗಳ ಧಾರ್ಮಿಕ ಆಚರಣೆಗಾಗಿ, ಪ್ರಾರ್ಥನಾ ಮಂದಿರದಿಂದ ಹಿಡಿದು ಎಲ್ಲಾ ಪೂಜಾ ಸ್ಥಳಗಳಿಗೆ ಹೆಚ್ಚಿನ ಹಣಕಾಸಿನ ನೆರವನ್ನು ನನ್ನ ಸರ್ಕಾರ ಕೊಡುತ್ತಾ ಇದೆ.

18. ನನ್ನ ಸರ್ಕಾರವು, ಕಾನೂನುಬಾಹಿರವಾಗಿ ಸರ್ಕಾರಿ ಜಮೀನನ್ನು ಪ್ರವೇಶಿಸುವ ಅಥವಾ ಸ್ವಾಧೀನಪಡಿಸಿಕೊಳ್ಳುವ, ಸರ್ಕಾರಿ ಜಮೀನುಗಳಿಗೆ ಸಂಬಂಧಿಸಿದಂತೆ ಖೋಟಾ ದಾಖಲೆಗಳನ್ನು ಸೃಷ್ಟಿಸುವ, ಕೃಷಿ ಭೂಮಿಯನ್ನು ಪರಿವರ್ತನೆ ಮಾಡಿಸಿಕೊಳ್ಳದೆ ಯಾವುದೇ ಅಂಥ ಜಮೀನನ್ನು ಕೃಷಿಯೇತರ ಉದ್ದೇಶಗಳಿಗಾಗಿ ಮಾರಾಟ ಮಾಡುವ ಅಥವಾ ಕರ್ನಾಟಕ ಭೂಕಂದಾಯ ಅಧಿನಿಯಮ, 1964ರ ಅಡಿಯಲ್ಲಿ ಮಾಡಿರುವ ಯಾವುದೇ ಕಾನೂನುಬದ್ಧ ಆದೇಶವನ್ನು ಉಲ್ಲಂಘಿಸುವಂತಹ ಕೃತ್ಯಗಳನ್ನು ಎಸಗುವ ಯಾವುದೇ ವ್ಯಕ್ತಿಗೆ ಕಾರಾಗೃಹವಾಸ ಮತ್ತು ದಂಡವನ್ನು ವಿಧಿಸುವ ಅಧ್ಯಾದೇಶವೊಂದನ್ನು 11.12.2006ರಂದು ಹೊರಡಿಸಿದೆ. ಈ ಬಗ್ಗೆ ವರದಿ ಮಾಡಲು ಜಂಟಿ ಸದನ

ಸಮಿತಿಯನ್ನು ರಚಿಸಲಾಗಿದೆ. ವರದಿಯ ಆಧಾರದ ಮೇಲೆ ಒತ್ತುವರಿಯನ್ನು ತೆರವುಗೊಳಿಸಲು ಕ್ರಮವನ್ನು ಕೈಗೊಳ್ಳಲಾಗುವುದು.

19. ನನ್ನ ಸರ್ಕಾರವು ಪ್ರಾಥಮಿಕ ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡುತ್ತಿದ್ದು, ಮಕ್ಕಳು ಶಾಲೆಯನ್ನು ಮಧ್ಯದಲ್ಲೇ ಬಿಡುವ ಸಮಸ್ಯೆಯನ್ನು ಎದುರಿಸಲು ಕ್ರಮಗಳನ್ನು ಕೈಗೊಂಡಿದೆ. ಶಾಲೆಯನ್ನು ಮಧ್ಯದಲ್ಲೇ ಬಿಟ್ಟು 6–14 ವರ್ಷಗಳ ವಯೋಗುಂಪಿನ ಸುಮಾರು 75000 ಮಕ್ಕಳನ್ನು ಮುಖ್ಯವಾಹಿನಿಗೆ ತರಲು 48.38 ಕೋಟಿ ರೂ.ಗಳ ವೆಚ್ಚದಲ್ಲಿ "ಚಿಣ್ಣರ ಅಂಗಳ" "ಶನಿವಾರ ಸೇತುಬಂಧ ಕೋರ್ಸ್", ಶಿಕ್ಷಣ ಖಾತರಿ ಯೋಜನಾ (ಇ.ಜಿ.ಎಸ್) ಕೇಂದ್ರಗಳನ್ನು ಪ್ರಾರಂಭಿಸುವುದು ಇವೇ ಮೊದಲಾದಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಉಚಿತ ಸಮವಸ್ತ್ರಗಳು ಮತ್ತು ಪಠ್ಯಪುಸ್ತಕಗಳನ್ನು ವಿಳಂಬವಿಲ್ಲದೆ ಹಂಚಲಾಗಿದೆ ಹಾಗೂ 35.63 ಕೋಟಿ ರೂ.ಗಳ ವೆಚ್ಚದಲ್ಲಿ ಎಲ್ಲಾ 175558 ಅರ್ಹ ಹೆಣ್ಣುಮಕ್ಕಳಿಗೆ ಬೈಸಿಕಲ್ಲುಗಳನ್ನು ವಿತರಣೆ ಮಾಡಲಾಗಿದೆ.

20. ನನ್ನ ಸರ್ಕಾರವು, ಸಾರ್ವಜನಿಕ ಆರೋಗ್ಯಕ್ಕೆ ತುಂಬಾ ಮಹತ್ವ ನೀಡುತ್ತದೆ ಮತ್ತು ಈ ಗುರಿಯ ಮುನ್ನಡೆಗಾಗಿ ಹಲವಾರು ಯೋಜನೆಗಳನ್ನು ಕೈಗೆತ್ತಿಕೊಂಡಿದೆ. ಅದರಲ್ಲಿ ಮುಖ್ಯವಾಗಿ ಹಿರಿಯ ನಾಗರೀಕರ ಪ್ರಯೋಜನಕ್ಕಾಗಿ ಹೊರರೋಗಿಗಳ / ಒಳರೋಗಿಗಳ ಮೀಸಲಾದ ವಿಭಾಗವನ್ನು ಎಲ್ಲಾ ಜಿಲ್ಲಾ ಆಸ್ಪತ್ರೆಗಳಲ್ಲಿ ಪ್ರಾರಂಭಿಸಲಾಗುವುದು. ಹಾಗೂ ಸುಸಜ್ಜಿತ ಆಂಬ್ಯುಲೆನ್ಸ್ ಸೌಲಭ್ಯವನ್ನು ಒದಗಿಸಲಾಗುವುದು.

21. ಡಾಃ ಡಿ.ಎಂ. ನಂಜುಂಡಪ್ಪ ಸಮಿತಿಯ ವರದಿಯ ಆಧಾರದ ಮೇಲೆ, ಹೊಸದಾಗಿ ಮೇಲ್ದರ್ಜೆಗೇರಿಸಲಾದ 51 ಸಮುದಾಯ ಆರೋಗ್ಯ ಕೇಂದ್ರಗಳಿಗೆ ಹೊಸ ಕಟ್ಟಡಗಳ ನಿರ್ಮಾಣ ಕಾರ್ಯವನ್ನು ಕೈಗೆತ್ತಿಕೊಳ್ಳಲಾಗಿದೆ. ಬಡ ಕೃಷಿ ಕಾರ್ಮಿಕರಿಗಾಗಿ "ಸುವರ್ಣ ಸುರಕ್ಷಾ" ಎಂಬ ವಿಮೆ ಯೋಜನೆಯೊಂದನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಹೆಚ್ಚು ಆರೋಗ್ಯ ಪ್ರಯೋಜನಗಳನ್ನು ಒದಗಿಸಲು ಕ್ರಮ ಕೈಗೊಳ್ಳಲಾಗುತ್ತಿದೆ ಮತ್ತು ಈ ಉದ್ದೇಶಕ್ಕೆ 35 ಕೋಟಿ ರೂ.ಗಳ ಮೊತ್ತವನ್ನು ಮೀಸಲಿಡಲಾಗಿದೆ.

22. ರಾಜ್ಯದಲ್ಲಿ ವೈದ್ಯಕೀಯ ಶಿಕ್ಷಣ ಕ್ಷೇತ್ರಕ್ಕೆ ಹೆಚ್ಚಿನ ಪ್ರೋತ್ಸಾಹ ನೀಡುವ ಸಲುವಾಗಿ, ನನ್ನ ಸರ್ಕಾರವು, 2006ನೇ ಸಾಲಿನಲ್ಲಿ ಬೆಳಗಾಂ, ಮಂಡ್ಯ ಮತ್ತು ಹಾಸನಗಳಲ್ಲಿ ಮೂರು ಹೊಸ ವೈದ್ಯಕೀಯ ಕಾಲೇಜುಗಳನ್ನು ತೆರೆದಿದೆ.

ಹಾಗೆಯೇ ನಮ್ಮ ಸರ್ಕಾರ ಆದ್ಯತೆಗೆ ಅನುಗುಣವಾಗಿ ಮುಂದಿನ ವರ್ಷದಲ್ಲಿ ಮತ್ತೆ ಮೂರು ವೈದ್ಯಕೀಯ ಮಹಾ ವಿದ್ಯಾಲಯಗಳನ್ನು ಪ್ರಾರಂಭಿಸಲು ಯೋಚಿಸುತ್ತಿದೆ. ವೃತ್ತಿಪರ ಕೋರ್ಸ್‌ಗಳಿಗೆ ಇನ್ನಷ್ಟು ಉಚಿತ ಸೀಟುಗಳನ್ನು ಪಡೆದು, ಸಿ.ಇ.ಟಿ. ಪ್ರವೇಶ ಪ್ರಕ್ರಿಯೆಯನ್ನು ಯಶಸ್ವಿಯಾಗಿ ನಡೆಸುತ್ತೇವೆ.

23. ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಹಿಂದುಳಿದ ವರ್ಗಗಳ ಅಭಿವೃದ್ಧಿ ಮತ್ತು ಕಲ್ಯಾಣದ ಬಗೆಗಿನ ತನ್ನ ಬದ್ಧತೆಯನ್ನು ಪುನರುಚ್ಚರಿಸುತ್ತಾ, ಸರ್ಕಾರವು ಅವರ ಕಲ್ಯಾಣಕ್ಕಾಗಿ ಅನೇಕ ಕಾರ್ಯಕ್ರಮಗಳನ್ನು ಕೈಗೆತ್ತಿಕೊಂಡಿದೆ. ಪರಿಶಿಷ್ಟ ಜಾತಿಗಳ ಕಲ್ಯಾಣಕ್ಕಾಗಿ ಈ ವರ್ಷ 317 ಕೋಟಿ ರೂ.ಗಳನ್ನು ಮೀಸಲಿರಿಸಲಾಗಿದ್ದು, ಅಷ್ಟೂ ಹಣವನ್ನು ಬಿಡುಗಡೆ ಮಾಡಲಾಗಿದೆ. ಇದು ಕಳೆದ ವರ್ಷದ ಹಂಚಿಕೆಗಿಂತ ಶೇ. 47.66ರಷ್ಟು ಹೆಚ್ಚು. ವಿಶೇಷ ಘಟಕ ಯೋಜನೆಯಡಿಯ ಹಂಚಿಕೆಯನ್ನು ಕೂಡ 822 ಕೋಟಿ ರೂ.ಗಳಿಂದ 1,457 ಕೋಟಿ ರೂ.ಗಳಿಗೆ ಹೆಚ್ಚಿಸಲಾಗಿದೆ.

24. ಘನತೆವೆತ್ತ ಭಾರತದ ರಾಷ್ಟ್ರಪತಿಗಳು ರಾಜ್ಯ ವಿಧಾನ ಮಂಡಲವನ್ನುದ್ದೇಶಿಸಿ 20ನೇ ನವೆಂಬರ್ 2005 ರಂದು ಮಾಡಿದ ತಮ್ಮ ಭಾಷಣದಲ್ಲಿ ನೀಡಿರುವ ಸಲಹೆಯನ್ನು ಗಮನದಲ್ಲಿಟ್ಟುಕೊಂಡು, ಸರ್ಕಾರವು ನರ್ಸಿಂಗ್ ಕೌನ್ಸಿಲ್ ಆಫ್ ಇಂಡಿಯಾ ಹಾಗೂ ರಾಜ್ಯ ಸರ್ಕಾರದಿಂದ ಮಾನ್ಯತೆ ಪಡೆದ ನರ್ಸಿಂಗ್ ತರಬೇತಿ ಸಂಸ್ಥೆಗಳ ಮುಖಾಂತರ 3,800 ಮಂದಿ ಪರಿಶಿಷ್ಟ ಜಾತಿಯ ಅಭ್ಯರ್ಥಿಗಳಿಗೆ 3½ ವರ್ಷದ ಜಿಎನ್‌ಎಂ ನರ್ಸಿಂಗ್ ಕೋರ್ಸ್ ತರಬೇತಿ ಹಾಗೂ 4 ವರ್ಷಗಳ ಬಿ.ಎಸ್ಸಿ. ನರ್ಸಿಂಗ್ ಕೋರ್ಸ್ ತರಬೇತಿಯನ್ನು ನೀಡುತ್ತಿದೆ. ಹಾಗೂ 3000 ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳು ಜಿಟಿಟಿ ಕೇಂದ್ರದ ವಿವಿಧ ಕೋರ್ಸುಗಳಲ್ಲಿ ತರಬೇತಿ ಮತ್ತು ಗಗನಸಖಿ ತರಬೇತಿ ಹಾಗೂ ವಿಮಾನ ಚಾಲಕ ತರಬೇತಿಯನ್ನು ಪಡೆಯುತ್ತಿದ್ದಾರೆ.

25. ಸರ್ಕಾರವು ಮಾಡಿದ ನಿರಂತರ ಪ್ರಯತ್ನಗಳ ಫಲವಾಗಿ, 13,504 ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಭ್ಯರ್ಥಿಗಳನ್ನು ಬ್ಯಾಕ್‌ಲಾಗ್ ಖಾಲಿ ಸ್ಥಾನಗಳ ವಿವಿಧ ಹುದ್ದೆಗಳಿಗೆ ನೇಮಕ ಮಾಡಿಕೊಳ್ಳಲಾಗಿದೆ.

26. ಹಿಂದುಳಿದ ವರ್ಗಗಳ ಕಲ್ಯಾಣಕ್ಕಾಗಿ ಪ್ರಸಕ್ತ ವರ್ಷದಲ್ಲಿ 204.49 ಕೋಟಿ ರೂ.ಗಳನ್ನು ಮೀಸಲಿರಿಸಲಾಗಿದ್ದು, ಇದು ಕಳೆದ ವರ್ಷದ ಹಂಚಿಕೆಗಿಂತ ಶೇ. 12ರಷ್ಟು ಹೆಚ್ಚು. ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ ಪ್ರಯೋಜನಕ್ಕಾಗಿ

50 ಹೊಸ ಮೆಟ್ರಿಕ್‌ಪೂರ್ವ ವಿದ್ಯಾರ್ಥಿ ನಿಲಯಗಳನ್ನು, 20 ಮೊರಾರ್ಜಿ ದೇಸಾಯಿ ವಸತಿ ಶಾಲೆಗಳನ್ನು ಹಾಗೂ ಗಗನಸಖಿ ಹಾಗೂ ನರ್ಸಿಂಗ್ ತರಬೇತಿಯನ್ನು ಪ್ರಾರಂಭಿಸಲು ಉದ್ದೇಶಿಸಲಾಗಿದೆ.

27. ನನ್ನ ಸರ್ಕಾರವು, ಹೆಣ್ಣುಮಕ್ಕಳ ಯೋಗಕ್ಷೇಮದ ಬಗ್ಗೆ ಕಳಕಳಿ ಹೊಂದಿದೆ ಮತ್ತು ಈ ಅಂಶವನ್ನು ಗಮನದಲ್ಲಿಟ್ಟುಕೊಂಡು ಭಾಗ್ಯಲಕ್ಷ್ಮೀ ಯೋಜನೆಯನ್ನು ಪ್ರಾರಂಭಿಸಲಾಗಿದ್ದು, ಈ ಯೋಜನೆ ಅಡಿಯಲ್ಲಿ ದಿನಾಂಕ 1-4-2006 ರಂದು ಅಥವಾ ನಂತರ ಜನಿಸಿದ ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳಿಗೆ ಸೇರಿದ ಹೆಣ್ಣುಮಕ್ಕಳ ಹೆಸರಿನಲ್ಲಿ 10,000/- ರೂ.ಗಳ ಮೊತ್ತವನ್ನು ಠೇವಣಿಯಿಡಲಾಗಿದೆ. ಆ ಹೆಣ್ಣು ಮಗುವಿಗೆ 18ನೆಯ ವಯಸ್ಸಿನಲ್ಲಿ ಬಡ್ಡಿ ಸಹಿತ ದೊರಕುವ ಈ ಹಣವು, ಆಕೆಗೆ ಸ್ವಾವಲಂಬನೆಯನ್ನು ಹಾಗೂ ಭವಿಷ್ಯವನ್ನು ಎದುರಿಸಲು ಆರ್ಥಿಕ ದೃಢತೆಯನ್ನು ನೀಡುತ್ತದೆ ಎಂದು ನಿರೀಕ್ಷಿಸಲಾಗಿದೆ. ಕರ್ನಾಟಕ ರಾಜ್ಯ ಮಹಿಳಾ ಆಯೋಗವು ಮಹಿಳೆಯರಲ್ಲಿ ಕಾನೂನು ಅರಿವನ್ನು ಮೂಡಿಸುವ, ಕುಟುಂಬ ನ್ಯಾಯಾಲಯಗಳನ್ನು ಸ್ಥಾಪಿಸುವ, ದುಡಿಮೆಯ ಸ್ಥಳದಲ್ಲಿ ಮಹಿಳೆಯರ ಮೇಲೆ ನಡೆಯುವ ಲೈಂಗಿಕ ಕಿರುಕುಳದ ದೂರುಗಳ ಕುರಿತು ಸಮಿತಿಗಳ ಸ್ಥಾಪನೆ ಇವುಗಳ ಬಗ್ಗೆ ಮೇಲ್ವಿಚಾರಣೆ ಮಾಡುವ ಕಾರ್ಯದಲ್ಲಿ ತನ್ನನ್ನು ಸಕ್ರಿಯವಾಗಿ ತೊಡಗಿಸಿಕೊಂಡಿದೆ. ಅಂಗವಿಕಲರ ಹಾಗೂ ಮಹಿಳೆಯರ ಸಬಲೀಕರಣಕ್ಕಾಗಿ ನನ್ನ ಸರ್ಕಾರ ಬದ್ಧವಾಗಿದೆ.

28. ಸರ್ಕಾರವು, ಕೊಳಗೇರಿ ನಿವಾಸಿಗಳ ಜೀವನಮಟ್ಟವನ್ನು ಸುಧಾರಣೆ ಮಾಡುವುದಕ್ಕಾಗಿ ಕಾರ್ಯಕ್ರಮಗಳನ್ನು ರೂಪಿಸಲು ಕೇಂದ್ರ ಪುರಸ್ಕೃತ ಜವಹರಲಾಲ್ ನೆಹರು ಅರ್ಬನ್ ರಿನ್ಯೂವಲ್ ಮಿಷಿನ್ (ಜೆಎನ್‌ಯುಆರ್‌ಎಂ) ಸ್ಕೀಮಿನ ಉಪಯೋಗವನ್ನು ಪಡೆದುಕೊಂಡಿದೆ. ಜೆಎನ್‌ಯುಆರ್‌ಎಂ ಸ್ಕೀಮಿನ ಅಡಿಯಲ್ಲಿ ಬೆಂಗಳೂರು ನಗರಕ್ಕೆ 187.17 ಕೋಟಿ ರೂಪಾಯಿ ವೆಚ್ಚದ ಒಂದು ಯೋಜನೆಯನ್ನು ಮತ್ತು ಮೈಸೂರು ನಗರಕ್ಕೆ 45.62 ಕೋಟಿ ರೂಪಾಯಿ ವೆಚ್ಚದ ಮತ್ತೊಂದು ಯೋಜನೆಯನ್ನು ಮಂಜೂರು ಮಾಡಲಾಗಿದೆ. 'ವಾಲ್ಮೀಕಿ ಅಂಬೇಡ್ಕರ್ ಆವಾಸ ಯೋಜನೆ'ಯನ್ನು ಯಶಸ್ವಿಯಾಗಿ ಅನುಷ್ಠಾನ ಗೊಳಿಸಲಾಗುತ್ತಿದೆ.

29. 2006-07ನೇ ಸಾಲಿನಲ್ಲಿ 39 ಭಾರೀ ಮತ್ತು ಮಧ್ಯಮ ನೀರಾವರಿ ಯೋಜನೆಗಳನ್ನು ಪೂರ್ಣಗೊಳಿಸುವ ಕಾರ್ಯಕ್ರಮ ಹಾಕಿಕೊಳ್ಳಲಾಗಿದೆ ಮತ್ತು ಈ ಯೋಜನೆಗಳಿಗೆ 983.10 ಕೋಟಿ ರೂ.ಗಳ ಅನುದಾನವನ್ನು

ಒದಗಿಸಲಾಗಿದೆ. ಹಾಗೆಯೇ 10 ವರ್ಷಗಳಿಗಿಂತಲೂ ಹೆಚ್ಚು ಕಾಲದಿಂದ ನೆನೆಗುದಿಗೆ ಬಿದ್ದಿರುವ ಯೋಜನೆಗಳಲ್ಲಿ ಹಲವನ್ನು ಒಂದು ವರ್ಷದೊಳಗೆ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ. ಈ ಯೋಜನೆಗಳಿಂದ 98,020 ಹೆಕ್ಟೇರುಗಳಷ್ಟು ಭೂಮಿಗೆ ನೀರಾವರಿ ಸೌಲಭ್ಯ ಒದಗಿಸಬಹುದಾಗಿದೆ. ಇವುಗಳಲ್ಲಿ ಬೆಣ್ಣೆತೊರ, ರಾಂಪುರ ಮತ್ತು ಹುಚ್ಚನಕೊಪ್ಪಲು ಯೋಜನೆಗಳು ಈಗಾಗಲೇ ಪೂರ್ಣಗೊಂಡಿವೆ. ತುಂಗಭದ್ರಾ ಮತ್ತು ಭದ್ರಾ ಯೋಜನೆಗಳ ನಾಲೆ ಆಧುನೀಕರಣ ಕಾಮಗಾರಿಗಳನ್ನು ನಾಲೆಯಲ್ಲಿ ನೀರು ಬಿಡದ ಅವಧಿಯಲ್ಲಿ ಪೂರ್ಣಗೊಳಿಸಲಾಗುವುದು.

30. ರಾಜ್ಯವು ಕೃಷ್ಣಾ ಮೇಲ್ದಂಡೆ ಯೋಜನೆಯಲ್ಲಿ ಲಭ್ಯವಿರುವ 173 ಟಿಎಂಸಿ ನೀರನ್ನು ಸಮರ್ಥವಾಗಿ ಬಳಸಿಕೊಳ್ಳಲು ಜೇವರ್ಗಿ ಶಾಖಾ ನಾಲೆ, ನಾರಾಯಣಪುರ ಬಲದಂಡೆ ನಾಲೆ, ಮುಳವಾಡ ಏತ ನೀರಾವರಿ ಯೋಜನೆ ಮೊದಲಾದ ಕಾಮಗಾರಿಗಳನ್ನು ಈ ವರ್ಷದಲ್ಲೇ ಪೂರ್ಣಗೊಳಿಸಲು ನನ್ನ ಸರ್ಕಾರ ಬದ್ಧವಾಗಿದೆ. ಗೋದಾವರಿ ನೀರಿನಲ್ಲಿಯ ನಮ್ಮ ಪಾಲನ್ನು ಬಳಸಿಕೊಳ್ಳಲು ಅನೇಕ ಬ್ಯಾರೇಜುಗಳ ಕಾರ್ಯವನ್ನು ನನ್ನ ಸರ್ಕಾರ ಕೈಗೆತ್ತಿಕೊಂಡಿದೆ.

31. ನಿಗದಿತ ಕಾಲಮಿತಿಯೊಳಗೆ ರಾಜ್ಯದ ಎಲ್ಲೆಡೆ ಹಾಗೂ ವಿಶೇಷವಾಗಿ ಬರಪೀಡಿತ ಪ್ರದೇಶಗಳಲ್ಲಿ ಸಣ್ಣ ನೀರಾವರಿ ಕಾಮಗಾರಿಗಳನ್ನು ಆದ್ಯತೆಯ ಮೇರೆಗೆ ಕೈಗೊಳ್ಳಲು ಹಣವನ್ನು ಒದಗಿಸಲು ನನ್ನ ಸರ್ಕಾರ ಬದ್ಧವಾಗಿದೆ

32. ಬೆಂಗಳೂರು ನಗರದಲ್ಲಿನ ಮತ್ತು ಅದರ ಸುತ್ತಮುತ್ತಲಿನ ಆರ್ಥಿಕವಾಗಿ ಮಹತ್ವ ಹೊಂದಿರುವ ರಸ್ತೆಗಳ ಸುಧಾರಣಾ ಕಾಮಗಾರಿಗಳನ್ನು 779 ಕೋಟಿ ರೂ.ಗಳ ಅಂದಾಜು ವೆಚ್ಚದಲ್ಲಿ ಕೈಗೆತ್ತಿಕೊಳ್ಳಲಾಗಿದೆ. ವಿವಿಧ ಜಿಲ್ಲೆಗಳಲ್ಲಿ ಮಿನಿ ವಿಧಾನಸೌಧ, ಕಚೇರಿ ಸಂಕೀರ್ಣಗಳು, ನಿವಾಸ ಕಟ್ಟಡಗಳು, ನ್ಯಾಯಾಲಯ ಕಟ್ಟಡಗಳು ಮತ್ತು ಆಸ್ಪತ್ರೆ ಕಟ್ಟಡಗಳ ನಿರ್ಮಾಣ ಕಾರ್ಯವನ್ನು 750 ಕೋಟಿ ರೂ.ಗಳ ಅಂದಾಜು ವೆಚ್ಚದಲ್ಲಿ ಇಲಾಖೆಯು ಕೈಗೆತ್ತಿಕೊಂಡಿದೆ. ಧಾರವಾಡ ಮತ್ತು ಗುಲ್ಬರ್ಗಾದಲ್ಲಿ ಉಚ್ಚ ನ್ಯಾಯಾಲಯದ ಸಂಚಾರಿ ಪೀಠಗಳಿಗಾಗಿ ಕಟ್ಟಡಗಳ ನಿರ್ಮಾಣ ಕಾರ್ಯವನ್ನು ಅನುಕ್ರಮವಾಗಿ 66 ಕೋಟಿ ರೂ.ಗಳ ಮತ್ತು 65.45 ಕೋಟಿ ರೂ.ಗಳ ಅಂದಾಜು ವೆಚ್ಚದಲ್ಲಿ ಕೈಗೆತ್ತಿಕೊಂಡಿದ್ದು, ಕಾಮಗಾರಿಗಳು ಪ್ರಗತಿಯಲ್ಲಿವೆ.

33. ರಾಜ್ಯದಲ್ಲಿರುವ ಗ್ರಾಮೀಣ ರಸ್ತೆಗಳನ್ನು ಜಿಲ್ಲಾ ಮುಖ್ಯ ರಸ್ತೆಗಳನ್ನಾಗಿ ಮೇಲ್ದರ್ಜೆಗೇರಿಸಲು ಹಾಗೂ ಜಿಲ್ಲಾ ಮುಖ್ಯ ರಸ್ತೆಗಳು ಮತ್ತು ರಾಜ್ಯ ಹೆದ್ದಾರಿಗಳ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆ ನೀಡಲಾಗುವುದು. ಕರ್ನಾಟಕ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ-2 ರಲ್ಲಿ ವಿಶ್ವ ಬ್ಯಾಂಕ್ ನೆರವಿನಿಂದ 3000 ಕಿಲೋ ಮೀಟರ್ ರಸ್ತೆಗಳನ್ನು ರೂಪಾಯಿ 4000 ಕೋಟಿಗಳ ಹೂಡಿಕೆಯ ಅಂದಾಜಿನಲ್ಲಿ ಅಭಿವೃದ್ಧಿಪಡಿಸಲು ಕ್ರಮ ಜಾರಿಯಲ್ಲಿದೆ.

34. ಕರ್ನಾಟಕವು, ವಿಕೇಂದ್ರೀಕರಣದ ಮೂಲಕ ಜನರಿಗೆ ಆಡಳಿತ ನೀಡುವ ನಿಟ್ಟಿನಲ್ಲಿ ಮುಂಚೂಣಿಯಲ್ಲಿದೆ. ಪಂಚಾಯತ್‌ರಾಜ್ ಸಂಸ್ಥೆಗಳ ಸದಸ್ಯರ ವೃಂದಕ್ಕೆ ಮಾತ್ರವಲ್ಲದೆ ಅಧ್ಯಕ್ಷರ ಹುದ್ದೆಗಳಿಗೂ ಸಹ ಮೀಸಲಾತಿಯನ್ನು ಒದಗಿಸುವ ಮೂಲಕ ಸಮಾಜದ ಧ್ವನಿಯಿಲ್ಲದ ವರ್ಗದವರಿಗೆ ಅಧಿಕಾರ ನೀಡುವ ಅದರ ಮಹತ್ವದ ಪ್ರಯತ್ನವು ಕರ್ನಾಟಕದಲ್ಲಿನ ಪಂಚಾಯತ್ ರಾಜ್ ವ್ಯವಸ್ಥೆಯ ಅತ್ಯಂತ ವೈಶಿಷ್ಟ್ಯಪೂರ್ಣ ಲಕ್ಷಣವಾಗಿದೆ. ಪಂಚಾಯತ್ ರಾಜ್ ಸಂಸ್ಥೆಗಳಿಗೆ ನಿಧಿಗಳನ್ನು, ಪ್ರಕಾರ್ಯಗಳನ್ನು ಮತ್ತು ಅಧಿಕಾರಿಗಳನ್ನು-ನೌಕರರನ್ನು ವರ್ಗಾಯಿಸುವ ವಿಷಯಕ್ಕೆ, ಸರ್ಕಾರದ ಕಾರ್ಯಸೂಚಿಯಲ್ಲಿ ಯಾವಾಗಲೂ ಅಗ್ರಸ್ಥಾನವನ್ನು ನೀಡಲಾಗಿದೆ. ಕರ್ನಾಟಕ ರಾಜ್ಯವು, ಸಂವಿಧಾನದ 73ನೇ ತಿದ್ದುಪಡಿಯಲ್ಲಿ ಹೇಳಿರುವಂತೆ ಪಂಚಾಯತ್ ರಾಜ್ ಸಂಸ್ಥೆಗಳಿಗೆ ಎಲ್ಲ 29 ವಿಷಯಗಳನ್ನು ವರ್ಗಾಯಿಸಿರುವ ಸಿಕ್ಕಿಂನ ನಂತರದ ಏಕಮಾತ್ರ ರಾಜ್ಯವಾಗಿದೆ.

35. ಸಂಘಟಿತ ಪ್ರಯತ್ನದ ಮೂಲಕ ಸುಸ್ಥಿರವಾದ ಸಮಗ್ರ ಮೂಲ ಸೌಕರ್ಯಗಳನ್ನು ಹೊಂದುವಂತೆ ಸದೃಢ ಗ್ರಾಮೀಣ ಸಮುದಾಯಗಳನ್ನು ರೂಪಿಸುವುದಕ್ಕಾಗಿ 'ಸುವರ್ಣ ಗ್ರಾಮೋದಯ' ಎಂಬ ಹೊಸ ಯೋಜನೆಯೊಂದನ್ನು ಪ್ರಾರಂಭಿಸಲಾಗಿದೆ. ಸರ್ಕಾರ, ಸರ್ಕಾರೇತರ ಸಂಘ ಸಂಸ್ಥೆಗಳ, ಖಾಸಗಿ ಪಾಲ್ಗೊಳ್ಳುವಿಕೆಯ ಮತ್ತು ಗ್ರಾಮೀಣ ಸಮುದಾಯದ ಜಂಟಿ ಪ್ರಯತ್ನಗಳ ಮೂಲಕ ಪ್ರತಿವರ್ಷ 1000 ಗ್ರಾಮಗಳನ್ನು ಅಭಿವೃದ್ಧಿಪಡಿಸುವ ಉದ್ದೇಶದಿಂದ ಈ ಹೊಸ ಯೋಜನೆಯನ್ನು ಪ್ರಾರಂಭಿಸಲಾಗಿದೆ.

36. ನನ್ನ ಸರ್ಕಾರವು ಶಾಶ್ವತವಾದ ಮತ್ತು ಸುರಕ್ಷಿತ ಕುಡಿಯುವ ನೀರನ್ನು ಗ್ರಾಮ ಸಮುಚ್ಚಯಗಳಿಗೆ ಸರಬರಾಜು ಮಾಡುವ ಯೋಜನೆಯನ್ನು ರೂಪಿಸಿದೆ.

37. ದೇಶದಲ್ಲಿರುವ, ಶೇಕಡಾ 25 ರಷ್ಟು ಆನೆಗಳಿಗೆ ಮತ್ತು ಶೇಕಡಾ 10 ರಷ್ಟು ಹುಲಿಗಳಿಗೆ ಕರ್ನಾಟಕದ ಅರಣ್ಯಗಳು ಆಶ್ರಯವನ್ನು ಕಲ್ಪಿಸಿವೆ. ಭಾರತ ಸರ್ಕಾರವು, ಅನ್ನಿ ರಾಷ್ಟ್ರೀಯ ಉದ್ಯಾನ ಮತ್ತು ದಾಂಡೇಲಿ ವನ್ಯಜೀವಿ ಧಾಮಗಳನ್ನು ರಾಜ್ಯದಲ್ಲಿನ ನಾಲ್ಕನೇ ಹುಲಿ ಮೀಸಲು ಅರಣ್ಯಧಾಮಗಳಾಗಿ ಘೋಷಿಸಲು ಒಪ್ಪಿಗೆ ನೀಡಿದೆ. ಶಿಗ್ಗಾಂವಿ ತಾಲ್ಲೂಕಿನಲ್ಲಿರುವ ಬಂಕಾಪುರ ಕೋಟೆ ಪ್ರದೇಶವನ್ನು ಈ ವರ್ಷ "ನವಿಲು ಸಂರಕ್ಷಣಾ ಮೀಸಲು ಪ್ರದೇಶ" ವೆಂದು ಘೋಷಿಸಲಾಗಿದೆ. ರಾಜ್ಯದಲ್ಲಿನ 53,910 ಹೆಕ್ಟೇರುಗಳಷ್ಟು ಅವನತಿ ಹೊಂದಿದ ಅರಣ್ಯ ಪ್ರದೇಶದಲ್ಲಿ ಮತ್ತು ಇತರ ಬಂಜರು ಸಮುದಾಯ ಭೂಮಿಗಳಲ್ಲಿ ಕಾಡು ಬೆಳೆಸುವ ಕಾರ್ಯವನ್ನು ಕೈಗೆತ್ತಿಕೊಳ್ಳಲಾಗಿದೆ.

38. ಬೆಂಗಳೂರಿನಲ್ಲಿ ಯೋಜನೆ ಮತ್ತು ಮೂಲ ಸೌಕರ್ಯ ವಿವಾದಗಳನ್ನು ಪರಿಣಾಮಕಾರಿಯಾಗಿ ಬಗೆಹರಿಸುವ ಹಾಗೂ ಉತ್ತಮ ಆಡಳಿತ ನೀಡುವ ಸಲುವಾಗಿ ನನ್ನ ಸರ್ಕಾರವು, ಈಗ ಇರುವ ಬೆಂಗಳೂರು ಮಹಾನಗರ ಪಾಲಿಕೆಗಿಂತ ಹೆಚ್ಚು ವ್ಯಾಪಕ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯನ್ನು ಸ್ಥಾಪಿಸುವ ಪ್ರಕ್ರಿಯೆಯನ್ನು ಪ್ರಾರಂಭಿಸಿದೆ. ಪ್ರಸಕ್ತ ವರ್ಷ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಮತ್ತು ಬೆಂಗಳೂರು ಮಹಾನಗರ ಪಾಲಿಕೆಯಂತಹ ಏಜೆನ್ಸಿಗಳ ಮೂಲಕ ಹಲವಾರು ಬೃಹತ್ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ. ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳ ಚರಂಡಿ ಮಂಡಲಿಯು 45 ನಗರಗಳಲ್ಲಿ ಮತ್ತು ಪಟ್ಟಣಗಳಲ್ಲಿ ನೀರು ಸರಬರಾಜು ಯೋಜನೆಯನ್ನು ಕೈಗೆತ್ತಿಕೊಂಡಿದೆ.

39. ಆಗಸ್ಟ್ 2006ರಲ್ಲಿ ಹೊರನಾಡು ಕನ್ನಡಿಗರ ಸಮಾವೇಶವನ್ನು ಬೆಂಗಳೂರಿನಲ್ಲಿ ಆಯೋಜಿಸಲಾಗಿತ್ತು. ಸುವರ್ಣ ಕರ್ನಾಟಕ ಕಾರ್ಯಕ್ರಮಗಳ ಅಂಗವಾಗಿ, ನನ್ನ ಸರ್ಕಾರವು, "ಸುವರ್ಣ ಕರ್ನಾಟಕ ಗೆಜೆಟಿಯರ್" ಅನ್ನು (1956–2006) ಮತ್ತು "ಬೃಹತ್ ಕರ್ನಾಟಕ ಸಂಪುಟ" ವನ್ನು (ಪ್ರಾಚೀನ ಕಾಲದಿಂದ 1799ರವರೆಗೆ) ಹೊರತರುತ್ತಿದೆ.

40. ಬಂಡವಾಳ ಹೂಡಿಕೆಗೆ ಒಂದು ಪ್ರಶಸ್ತ ಸ್ಥಳವಾಗಿ ಕರ್ನಾಟಕದ ಆಕರ್ಷಣೀಯತೆಯೊಂದಿಗೆ ಸುಸಂಗತವಾದ ಮತ್ತು ತ್ವರಿತ ಕೈಗಾರಿಕಾ ಬೆಳವಣಿಗೆಯ ಹಿನ್ನೆಲೆಯಿಂದಾಗಿ, ಕರ್ನಾಟಕದಲ್ಲಿ ಬಂಡವಾಳ ಹೂಡಿಕೆಯ ಗತಿಯು ಪ್ರಚಲಿತ ವರ್ಷದ ಅವಧಿಯಲ್ಲಿ ಅತಿ ತ್ವರಿತ ಹೆಚ್ಚಳವನ್ನು ತೋರಿಸಿದೆ. 2006ರ ಏಪ್ರಿಲ್‌ನಿಂದ ಡಿಸೆಂಬರ್‌ವರೆಗಿನ ಅವಧಿಯಲ್ಲಿ ರೂ. 78638.81

ಕೋಟಿ ಬಂಡವಾಳ ಹೂಡಿಕೆ ಮತ್ತು 1535329 ಉದ್ಯೋಗ ಸಾಮರ್ಥ್ಯವುಳ್ಳ 756 ಯೋಜನೆಗಳಿಗೆ ಅನುಮೋದನೆ ನೀಡಲಾಗಿದೆ.

41. ಸಾರ್ವಜನಿಕ ಮತ್ತು ಖಾಸಗಿ ವಲಯಗಳ ಸಹಭಾಗಿತ್ವದಲ್ಲಿ ಒಂದು ಲಕ್ಷ ನಿರುದ್ಯೋಗಿ ಯುವಕರಿಗೆ ತರಬೇತಿ ನೀಡಿ ಅವರ ಕೌಶಲ್ಯವನ್ನು ಹೆಚ್ಚಿಸುವ ದೃಷ್ಟಿಯಿಂದ ರಾಜ್ಯ ಸರ್ಕಾರವು ಸುವರ್ಣ ಕಾಯಕ ಉದ್ಯೋಗ ಶಿಕ್ಷಣ ಯೋಜನೆಯನ್ನು ಪ್ರಾರಂಭಿಸಿದೆ. ಇದಲ್ಲದೆ ರಾಜ್ಯ ಸರ್ಕಾರದ ಸಹಾಯದೊಂದಿಗೆ ಖಾಸಗಿ ವಲಯಗಳ ಸಹಭಾಗಿತ್ವದ ಪ್ರಯತ್ನಗಳ ಮೂಲಕ ತರಬೇತಿ ಮೂಲ ಸೌಕರ್ಯಗಳನ್ನು ಒದಗಿಸಿ, ತರಬೇತಿಯನ್ನು ನೀಡುವಂತಹ ಮತ್ತೊಂದು ಯೋಜನೆಯಾದ ಸುವರ್ಣ ಕಾಯಕ ಕೌಶಲ್ಯ ಅಭಿವೃದ್ಧಿ ಯೋಜನೆಯನ್ನು ಪ್ರಾರಂಭಿಸಲಾಗಿದೆ.

42. ಅಲ್ಲದೇ, ರಾಜ್ಯದ ಎರಡನೇ ದರ್ಜೆಯ ನಗರಗಳಲ್ಲಿ ವಿಶೇಷ ಆರ್ಥಿಕ ವಲಯಗಳನ್ನು ಸ್ಥಾಪಿಸಲು ಸರ್ಕಾರವು ಬದ್ಧವಾಗಿದೆ. ಹಾಸನ, ಶಿವಮೊಗ್ಗ ಹಾಗೂ ಮಂಗಳೂರಿನಲ್ಲಿ ವಿಶೇಷ ಆರ್ಥಿಕ ವಲಯಗಳನ್ನು ಸ್ಥಾಪಿಸಲು ಕರ್ನಾಟಕವು ಅನುಮೋದನೆಯನ್ನು ಪಡೆದುಕೊಂಡಿದೆ. ಖಾಸಗಿ ವಲಯದವರಿಂದ ವಿಶೇಷ ಆರ್ಥಿಕ ವಲಯ ಸ್ಥಾಪನೆ ಮಾಡುವುದರ ಜೊತೆಗೆ ಮಂಗಳೂರಿನ ಸುತ್ತಮುತ್ತಲಿನ ಪ್ರದೇಶದಲ್ಲಿ ಪೆಟ್ರೋಲಿಯಂ ಕ್ಷೇತ್ರಕ್ಕಾಗಿ ಬೃಹತ್ ವಿಶೇಷ ಆರ್ಥಿಕ ವಲಯವನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ.

43. ರಾಜ್ಯದಲ್ಲಿ ಸರಿಯಾದ ಕೈಗಾರಿಕಾ ಮೂಲ ಸೌಕರ್ಯದ ಕೊರತೆಯು ತ್ವರಿತ ಕೈಗಾರೀಕೀಕರಣಕ್ಕಿರುವ ಮುಖ್ಯ ಅಡಚಣೆಗಳಲ್ಲಿ ಒಂದು ಎಂದು ಹೊಸ ಕೈಗಾರಿಕಾ ನೀತಿ 2006–2011 ಗುರುತಿಸಿದೆ. ಈ ನ್ಯೂನತೆಯನ್ನು ಸರಿಪಡಿಸುವ ದೃಷ್ಟಿಯಿಂದ ನನ್ನ ಸರ್ಕಾರವು ಎರಡು ಬಗೆಯ ಮಾರ್ಗಗಳನ್ನು ಅನುಸರಿಸಲು ಉದ್ದೇಶಿಸಿದೆ.

ಅ) ಕಾರ್ಯ ಸಾಧ್ಯವೆನಿಸಿದ ಕಡೆಗಳಲ್ಲಿ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವುದು ಮತ್ತು ಕೈಗಾರಿಕೆಗಳಿಂದ ಕುಸಿಯುತ್ತಿರುವ ಬೇಡಿಕೆಯನ್ನು ಉತ್ತಮಪಡಿಸುವ ದೃಷ್ಟಿಯಿಂದ ವರ್ಷಕ್ಕೆ ಕನಿಷ್ಠ 5000 ಎಕರೆಗಳಷ್ಟು ವಿಸ್ತೀರ್ಣದ ಕೈಗಾರಿಕಾ ಬಡಾವಣೆಗಳನ್ನು ರೂಪಿಸುವುದು.

ಆ) ಕೈಗಾರಿಕಾ ಎಸ್ಟೇಟುಗಳಲ್ಲಿ ಕೈಗಾರಿಕಾ ಮೂಲಭೂತ ಸೌಕರ್ಯಗಳನ್ನು ಮೇಲ್ದರ್ಜೆಗೇರಿಸುವಂಥ ಕಾಮಗಾರಿಗಳನ್ನು ಕೈಗೊಳ್ಳುವ ಮೂಲಕ

ಅವುಗಳ ಗುಣಮಟ್ಟವನ್ನು ಹೆಚ್ಚಿಸುವುದು– ಇದಕ್ಕಾಗಿ ರಾಜ್ಯ ಸರ್ಕಾರವು ರೂ. 500 ಕೋಟಿ ಒದಗಿಸಲು ಉದ್ದೇಶಿಸಿದೆ.

44. ಬಾಲ ಕಾರ್ಮಿಕರನ್ನು ಗುರುತಿಸುವ ಮತ್ತು ಅವರಿಗೆ ಪುನರ್ವಸತಿ ಕಲ್ಪಿಸುವ ಯೋಜನೆಯ ಅಡಿಯಲ್ಲಿ ಕಾರ್ಮಿಕ ಇಲಾಖೆಯ ಪುನರ್ವಸತಿ ಕಲ್ಪಿಸುವ ಪ್ರಯತ್ನಗಳನ್ನು ಒಗ್ಗೂಡಿಸಲು ಮತ್ತು ಎಲ್ಲ ಮಕ್ಕಳು ಶಾಲೆಗೆ ದಾಖಲಾಗುವಂತೆ ಮಾಡುವ ಮತ್ತು ಅವರನ್ನು ಶಾಲೆಯಲ್ಲೇ ಉಳಿಯುವಂತೆ ಮಾಡುವ ಉದ್ದೇಶದಿಂದ ಮತ್ತು ಮಕ್ಕಳನ್ನು ಕೆಲಸಕ್ಕೆ ಸೇರಿಸಿಕೊಳ್ಳುವುದನ್ನು ತಡೆಯುವ ಸಲುವಾಗಿ ಪೂರ್ಣ ಅರಿವನ್ನು ಮೂಡಿಸುವ ಕಾರ್ಯಕ್ರಮಗಳನ್ನು ಕೈಗೊಳ್ಳಲು ಶಿಕ್ಷಣ ಮತ್ತು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಗಳೊಂದಿಗೆ ಕೂಡಿ ಕೆಲಸ ಮಾಡುತ್ತದೆ.

45. ಕರ್ನಾಟಕ ಕಟ್ಟಡ ಮತ್ತು ಇತರ ನಿರ್ಮಾಣ ಕೆಲಸಗಾರರ ಹಿತರಕ್ಷಣೆಗಾಗಿ ನಿಯಮಗಳನ್ನು ರಚಿಸಲಾಗಿದೆ. ಇದರ ಪ್ರಯೋಜನವನ್ನು 15 ಲಕ್ಷ ಕಟ್ಟಡ ನಿರ್ಮಾಣ ಕೆಲಸಗಾರರು ಪಡೆಯಲಿದ್ದಾರೆ.

46. ನನ್ನ ಸರ್ಕಾರವು ಬಿಪಿಎಲ್ ಕಾರ್ಡುಗಳ ನೀಡಿಕೆಯನ್ನು ಗಣಕೀಕರಿಸಲು ಕ್ರಮ ತೆಗೆದುಕೊಂಡಿದೆ. ಮನೆಮನೆ ಸಮೀಕ್ಷೆಯ ಮೂಲಕ ಗುರುತಿಸಲಾದ 1.10 ಕೋಟಿ ಫಲಾನುಭವಿಗಳಿಗೆ ತಾತ್ಕಾಲಿಕ ಕಾರ್ಡುಗಳನ್ನು ನೀಡಲಾಗಿದೆ. ಇದುವರೆಗೆ 64 ಲಕ್ಷಕ್ಕೂ ಹೆಚ್ಚು ಕುಂದುಕೊರತೆಗಳನ್ನು ಸ್ವೀಕರಿಸಲಾಗಿದೆ ಮತ್ತು ಅವುಗಳನ್ನು ನಿವಾರಿಸಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಆ ನಂತರ ಕಾಯಂ ಪಡಿತರ ಚೀಟಿಗಳನ್ನು ನೀಡಲಾಗುವುದು.

47. ಮನೆಮನೆ ಸಮೀಕ್ಷೆ ಅವಧಿಯಲ್ಲಿ ಗುರುತಿಸಲಾದ ಕುಟುಂಬಗಳಿಗೆ ಪ್ರತಿ ವ್ಯಕ್ತಿಗೆ ತಲಾ 5 ಕೆ.ಜಿ. (4 ಕೆ.ಜಿ. ಅಕ್ಕಿ ಮತ್ತು 1 ಕೆ.ಜಿ. ಗೋಧಿ) ಯಂತೆ ಗರಿಷ್ಠ 25 ಕೆ.ಜಿ. ಆಹಾರ ಧಾನ್ಯಗಳನ್ನು (20 ಕೆ.ಜಿ. ಅಕ್ಕಿ ಮತ್ತು 5 ಕೆ.ಜಿ. ಗೋಧಿ) ವಿತರಿಸುವ ಘಟಕ ಪದ್ಧತಿಯನ್ನು ಅಳವಡಿಸಿಕೊಳ್ಳಲು ಕ್ರಮ ತೆಗೆದುಕೊಳ್ಳಲಾಗುವುದು.

48. 2006ರಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಸ್ಥಿತಿಯು ತೃಪ್ತಿಕರವಾಗಿತ್ತು. ಗೃಹ ರಕ್ಷಕ ದಳ ಮತ್ತು ಅಗ್ನಿ ಶಾಮಕ ದಳಗಳ ನೆರವಿನೊಂದಿಗೆ ಪೊಲೀಸರು ಧಾರ್ಮಿಕ ಉತ್ಸವಗಳಿಗೆ ಮತ್ತು ದತ್ತ ಮೂಲ ಅಭಿಯಾನಕ್ಕೆ ವ್ಯಾಪಕ ಬಂದೋಬಸ್ತ್ ವ್ಯವಸ್ಥೆ ಮಾಡಿದ್ದರು. ಅವುಗಳನ್ನು ಶಾಂತಿಯುತವಾಗಿ ಆಚರಿಸಲಾಯಿತು. ಅಲ್ಲದೆ, ಅವರು ಕೃಷ್ಣಾ ಮತ್ತು ಭೀಮಾ ನದಿಗಳಲ್ಲಿ

ಹಿಂದೆಂದೂ ಇಲ್ಲದಂಥ ಪ್ರವಾಹಗಳಿಂದುಂಟಾದ ತುರ್ತು ಪರಿಸ್ಥಿತಿಗಳನ್ನು ಸಹ ಪರಿಣಾಮಕಾರಿಯಾಗಿ ನಿಭಾಯಿಸಿದರು. ರಾಜ್ಯದಲ್ಲಿ ನಕ್ಸಲೈಟ್ ಮತ್ತು ಭಯೋತ್ಪಾದಕ ಚಟುವಟಿಕೆಗಳನ್ನು ನಿಯಂತ್ರಣದಲ್ಲಿಡಲಾಗಿದೆ. 2006ರಲ್ಲಿ ರಾಜ್ಯದಲ್ಲಿನ ಅಪರಾಧ ನಕ್ಷೆಯು ಇಳಿಮುಖ ಪ್ರವೃತ್ತಿಯನ್ನು ತೋರಿಸಿದೆ. ಕಳೆದ ಎರಡು ವರ್ಷಗಳಿಗೆ ಹೋಲಿಸಿದರೆ ಮಹಿಳೆಯರ ಮೇಲೆಸಗುವ ಅಪರಾಧಗಳು ಸಹ ಇಳಿಮುಖವಾಗಿವೆ.

49. ಬೆಳೆಯುತ್ತಿರುವ ಬೆಂಗಳೂರು ಮಹಾನಗರದಲ್ಲಿ ಅಪರಾಧಗಳನ್ನು ನಿಯಂತ್ರಿಸಲು, ಹೆಚ್ಚುವರಿಯಾಗಿ ಒಂದು ಆಗ್ನೇಯ ಪೊಲೀಸ್ ವಿಭಾಗವನ್ನು ತೆರೆಯಲಾಗಿದೆ. ಪೊಲೀಸ್ ಇಲಾಖೆಯ ಸಿಬ್ಬಂದಿಗೆ ಕಲ್ಯಾಣ ಯೋಜನೆಗಳನ್ನು ರೂಪಿಸಿ ಪೊಲೀಸ್ ವ್ಯವಸ್ಥೆಯನ್ನು ಬಲಪಡಿಸಲು ಅಗತ್ಯ ಕ್ರಮ ಜರುಗಿಸಲಾಗುತ್ತಿದೆ.

50. ಕರ್ನಾಟಕ ರಾಜ್ಯ ಪೊಲೀಸ್ ವಸತಿ ನಿಗಮ ನಿಯಮಿತವು ಗುಲ್ಬರ್ಗಾದಲ್ಲಿ 'ಹಸಿರು ಕಟ್ಟಡ' ವನ್ನು ನಿರ್ಮಿಸಿದ ದೇಶದಲ್ಲಿನ ಮೊಟ್ಟ ಮೊದಲ ಸಾರ್ವಜನಿಕ ವಲಯ ಘಟಕವಾಗಿದೆ. ಈ ನಿಗಮವು ಅದರ ಪರಿಸರ ಸ್ನೇಹಿ ನಿರ್ಮಾಣಕ್ಕಾಗಿ 2006ರ ಗೋಲ್ಡನ್ ಪೀಕಾಕ್ ಎಕೋ ಇನ್ನೋವೇಷನ್ ಪ್ರಶಸ್ತಿಯನ್ನು ಗೆದ್ದುಕೊಂಡಿದೆ.

51. ಸುವರ್ಣ ಕರ್ನಾಟಕ ವರ್ಷವಾದುದರಿಂದ ಜೀವಾವಧಿ ಶಿಕ್ಷೆಗೆ ಒಳಗಾದ 319 ಪುರುಷ ಕೈದಿಗಳು ಹಾಗೂ 3 ಮಹಿಳಾ ಕೈದಿಗಳಿಗೆ ಶಿಕ್ಷೆಯನ್ನು ಕ್ರಮವಾಗಿ 9 ವರ್ಷದ ಮತ್ತು 4 ವರ್ಷವೆಂದು ನಿರ್ಧರಿಸಿ ಅವರನ್ನು ಬಿಡುಗಡೆ ಮಾಡಲಾಯಿತು. ಅಲ್ಲದೆ ಬಂಧೀಖಾನೆ ಆಡಳಿತದಲ್ಲಿ ಅನೇಕ ಸುಧಾರಣಾ ಕ್ರಮಗಳನ್ನು ಸಹ ಕೈಗೊಂಡಿದ್ದೇವೆ.

52. ಉತ್ತಮ ಸಾರ್ವಜನಿಕ ಸಾರಿಗೆ ವ್ಯವಸ್ಥೆಯು ತ್ವರಿತವಾಗಿ ಬೆಳೆಯುತ್ತಿರುವ ಅರ್ಥವ್ಯವಸ್ಥೆಯ ಅತ್ಯಾವಶ್ಯಕ ವೈಶಿಷ್ಟ್ಯಗಳಲ್ಲೊಂದು. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಮತ್ತು ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ ಇವು ಉನ್ನತ ತಂತ್ರಜ್ಞಾನದ ವೋಲ್ವೋ ಬಸ್‌ಗಳು ಸೇರಿದಂತೆ 4000ಕ್ಕೂ ಹೆಚ್ಚು ಹೊಸ ಬಸ್‌ಗಳನ್ನು ಸೇರ್ಪಡೆ ಮಾಡುವ ಮೂಲಕ ತಮ್ಮ ವಾಹನ ಪಡೆಯನ್ನು ಆಧುನೀಕರಿಸಿವೆ. ಈ ಸಂಸ್ಥೆಗಳನ್ನು ದೇಶದಲ್ಲಿಯೇ ಅತ್ಯುತ್ತಮವಾಗಿ ನಡೆಯುತ್ತಿರುವ ರಾಜ್ಯ ನಿಗಮಗಳೆಂದು ನಿರ್ಣಯಿಸಲಾಗಿದೆ.

53. ವಿದ್ಯುತ್ ಉತ್ಪಾದನೆಗೆ ಸಂಬಂಧಿಸಿದಂತೆ ಹೇಳುವುದಾದರೆ, ವಿದ್ಯುತ್ ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸುವುದಕ್ಕಾಗಿ ನನ್ನ ಸರ್ಕಾರವು ಸಾಧ್ಯವಿರುವ ಎಲ್ಲ ಪ್ರಯತ್ನಗಳನ್ನು ಮಾಡುತ್ತಿದೆ. ವಾರಾಹಿ ಜಲ ವಿದ್ಯುತ್ ಯೋಜನೆಯ 3 ಹಾಗೂ 4ನೇ ಘಟಕಗಳ ಕೆಲಸ ಪ್ರಗತಿಯಲ್ಲಿದ್ದು, ಪೂರ್ಣಗೊಂಡಾಗ ಆ ಯೋಜನೆ 230 ಮೆಗಾವ್ಯಾಟ್ ವಿದ್ಯುತ್ ಉತ್ಪಾದನಾ ಸಾಮರ್ಥ್ಯ ಹೊಂದಿರುತ್ತದೆ. ಈ ಯೋಜನೆ 2008ರ ವೇಳೆಗೆ ಪೂರ್ಣಗೊಳ್ಳುವುದೆಂದು ನಿರೀಕ್ಷಿಸಲಾಗಿದೆ. 250 ಮೆಗಾವ್ಯಾಟ್ ಸಾಮರ್ಥ್ಯದ ರಾಯಚೂರು ಶಾಖೋತ್ಪನ್ನ ವಿದ್ಯುತ್ ಕೇಂದ್ರದ 8ನೇ ಘಟಕಕ್ಕೆ ಸಂಬಂಧಪಟ್ಟಂತೆ ಬಿಟಿಜಿ ಹಾಗೂ ಆಕ್ಸಿಲರಿ ಪ್ಯಾಕೇಜ್‌ಗಾಗಿ ಮೆ॥ ಬಿಎಚ್‌ಇಎಲ್ ಕಂಪನಿಗೆ ಆಶಯ ಪತ್ರ ನೀಡಲಾಗಿದೆ. 500 ಮೆಗಾವ್ಯಾಟ್ ಸಾಮರ್ಥ್ಯದ ಭದ್ರಾ ಶಾಖೋತ್ಪನ್ನ ವಿದ್ಯುತ್ ಕೇಂದ್ರದ 2ನೇ ಘಟಕದ ಕಾಮಗಾರಿ ಕುರಿತಂತೆ ಬಿಎಚ್‌ಇಎಲ್ ಕಂಪನಿಗೆ ಇಪಿಸಿ ಪ್ಯಾಕೇಜ್‌ಗಾಗಿಯೂ ಆಶಯ ಪತ್ರವನ್ನು ನೀಡಲಾಗಿದೆ.

54. ಪ್ರಸಕ್ತ ವರ್ಷದಲ್ಲಿ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು 31 ಹೊಸ ಕೇಂದ್ರಗಳ ನಿರ್ಮಾಣ ಕಾರ್ಯವನ್ನು ಪೂರೈಸಿದ್ದು, 2007ರ ಮಾರ್ಚ್ ಅಂತ್ಯದ ವೇಳೆಗೆ ಇನ್ನೂ 100 ಕೇಂದ್ರಗಳ ಕಾರ್ಯಾರಂಭ ಮಾಡಲಿವೆ. ಇದು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು ಅನುಷ್ಠಾನದ ವೇಗವನ್ನು ಗಮನಾರ್ಹವಾಗಿ ಹೆಚ್ಚಿಸುತ್ತಿರುವುದರ ಪ್ರತೀಕ.

55. ಭಾರತ ಸರ್ಕಾರವು, ರಾಜೀವ್‌ಗಾಂಧಿ ಗ್ರಾಮೀಣ ವಿದ್ಯುದ್ದೀಕರಣ ಯೋಜನೆಯಡಿ 2005ರ ಡಿಸೆಂಬರ್‌ನಲ್ಲಿ 375 ಕೋಟಿ ರೂ. ವೆಚ್ಚದಲ್ಲಿ 17 ಜಿಲ್ಲೆಗಳಿಗೆ ಯೋಜನೆಗಳನ್ನು ಮಂಜೂರು ಮಾಡಿತ್ತು. 2006ರ ಡಿಸೆಂಬರ್‌ನಲ್ಲಿ ಭಾರತ ಸರ್ಕಾರವು ಉಳಿದ 9 ಜಿಲ್ಲೆಗಳಿಗೆ ಎಂದರೆ ಗುಲ್ಬರ್ಗಾ, ಬೆಳಗಾವಿ, ಉತ್ತರ ಕನ್ನಡ, ಶಿವಮೊಗ್ಗ, ದಕ್ಷಿಣ ಕನ್ನಡ, ಉಡುಪಿ, ಚಿಕ್ಕಮಗಳೂರು, ಚಾಮರಾಜನಗರ, ಕೊಡಗು ಜಿಲ್ಲೆಗಳಿಗೆ 238 ಕೋಟಿ ರೂ. ಮೌಲ್ಯದ ಯೋಜನೆಗಳನ್ನು ಮಂಜೂರು ಮಾಡಿದೆ ಎಂದು ತಿಳಿಸಲು ನನಗೆ ಸಂತೋಷವೆನಿಸುತ್ತದೆ. ಈವರೆಗೆ, ರಾಜೀವ್‌ಗಾಂಧಿ ಗ್ರಾಮೀಣ ವಿದ್ಯುದ್ದೀಕರಣ ಯೋಜನೆಯಡಿ 47 ಗ್ರಾಮಗಳಿಗೆ, 730 ಕುಗ್ರಾಮಗಳಿಗೆ, 1708 ದಲಿತರ ಬಸದಿಗಳಿಗೆ ಹಾಗೂ ಆಶ್ರಯ ಕಾಲೋನಿಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದೆ. 1,41,025 ಗ್ರಾಮೀಣ ಕುಟುಂಬಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದ್ದು, ಅವುಗಳಲ್ಲಿ ಬಡತನ ರೇಖೆಗಿಂತ ಕೆಳಗಿರುವ 1,01,073 ಕುಟುಂಬಗಳು ಸೇರಿವೆ. ವಿದ್ಯುಚ್ಛಕ್ತಿ ಸಂಪರ್ಕ ಕಲ್ಪಿಸಲಾಗಿರುವ 1268 ಹಳ್ಳಿಗಳಲ್ಲಿ

ವಿತರಣಾ ವ್ಯವಸ್ಥೆಯನ್ನು ಬಲಪಡಿಸಲಾಗಿದೆ. ಹಾಸನದಲ್ಲಿ ಒಂದು ಜೈವಿಕ ಇಂಧನ ಘಟಕವನ್ನು ಸ್ಥಾಪಿಸಲಾಗಿದೆ.

56. ಪ್ರವಾಸೋದ್ಯಮ ಹಾಗೂ ವಾಣಿಜ್ಯ ಮತ್ತು ಕೈಗಾರಿಕೆಗಳ ಬೆಳವಣಿಗೆಯಲ್ಲಿ ವಿಮಾನ ನಿಲ್ದಾಣಗಳು ವಹಿಸುವ ಪಾತ್ರದ ಮಹತ್ವವನ್ನು ಪರಿಗಣಿಸಿ, ಸರ್ಕಾರವು ರಾಜ್ಯದಲ್ಲಿ ಹನ್ನೆರಡು ವಿಮಾನ ನಿಲ್ದಾಣಗಳನ್ನು ಅಭಿವೃದ್ಧಿಪಡಿಸುವ ವಿಷಯದಲ್ಲಿ ಪೂರ್ವನಿಯಾಮಕವಾಗಿ ಸಾಗುತ್ತಿದೆ. 2008ರ ಏಪ್ರಿಲ್ ವೇಳೆಗೆ ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣವು ಕಾರ್ಯಾರಂಭ ಮಾಡಲಿದೆ. ಭಾರತ ವಿಮಾನ ನಿಲ್ದಾಣ ಪ್ರಾಧಿಕಾರವು ಮಂಗಳೂರು, ಬೆಳಗಾವಿ, ಹುಬ್ಬಳ್ಳಿ ವಿಮಾನ ನಿಲ್ದಾಣಗಳನ್ನು ವಿಸ್ತರಿಸುತ್ತಿದೆ. ಭಾರತ ವಿಮಾನ ನಿಲ್ದಾಣ ಪ್ರಾಧಿಕಾರಕ್ಕೆ ಅಗತ್ಯವಿರುವ ಭೂಮಿಯನ್ನು ರಾಜ್ಯ ಸರ್ಕಾರವು ಉಚಿತವಾಗಿ ನೀಡುತ್ತಿದೆ.

57. ಕಳೆದ ವರ್ಷದಲ್ಲಿ ಮಾಹಿತಿ ತಂತ್ರಜ್ಞಾನ ಹಾಗೂ ಜೈವಿಕ ತಂತ್ರಜ್ಞಾನ ವಲಯ ಅತ್ಯುತ್ತಮ ಸಾಧನೆಯನ್ನು ಮುಂದುವರೆಸಿದೆ. ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ಬಂಡವಾಳ ಹೂಡುವುದಕ್ಕೆ ಬೆಂಗಳೂರು ಪ್ರಶಸ್ತ ಸ್ಥಳವಾಗಿಯೇ ಮುಂದುವರೆದಿದೆ ಎಂದು ತಿಳಿಸಲು ನನಗೆ ಸಂತೋಷವೆನಿಸುತ್ತದೆ. ಕಳೆದ ವರ್ಷ 208 ಹೊಸ ಮಾಹಿತಿ ತಂತ್ರಜ್ಞಾನ ಕಂಪನಿಗಳ ಪೈಕಿ ನಾಲ್ಕು ಕಂಪನಿಗಳು ಫಾರ್ಚುನ್ 500ದ ಪಟ್ಟಿಯಲ್ಲಿ ಹಾಗೂ 11 ಕಂಪನಿಗಳು ದಶಲಕ್ಷ ಡಾಲರ್ ಕಂಪನಿಗಳ ಪಟ್ಟಿಯಲ್ಲಿ ಸೇರ್ಪಡೆಯಾಗಿವೆ. ಐಟಿ ಕ್ಷೇತ್ರವೊಂದೇ ರಾಜ್ಯದಲ್ಲಿ ನಾಲ್ಕು ಲಕ್ಷ ಜನರಿಗೆ ನೇರ ಉದ್ಯೋಗ ಒದಗಿಸುತ್ತದೆ. ಭಾರತದ ಸಾಫ್ಟ್‌ವೇರ್ ರಫ್ತಿನ 1/3 ಭಾಗದಷ್ಟು ಎಂದರೆ 37000 ಕೋಟಿ ರೂ. ಮೌಲ್ಯದ ಸಾಫ್ಟ್‌ವೇರ್ ಕರ್ನಾಟಕದಿಂದ ರಫ್ತಾಗುತ್ತದೆ. ಜೈವಿಕ ತಂತ್ರಜ್ಞಾನ ವಲಯವು ಕೂಡ 500 ಕೋಟಿಗಿಂತ ಹೆಚ್ಚಿನ ಮೊತ್ತದ ಬಂಡವಾಳ ಹೂಡಿಕೆಯನ್ನು ಆಕರ್ಷಿಸಿದ್ದು, 35 ಹೊಸ ಜೈವಿಕ ತಂತ್ರಜ್ಞಾನ ಕಂಪನಿಗಳ ಪ್ರವೇಶಕ್ಕೆ ಅವಕಾಶ ಕಲ್ಪಿಸಿದೆ. ಈ ಉದ್ದಿಮೆಗಳಿಗಾಗಿ ರಸ್ತೆಗಳನ್ನು ಮೇಲ್ದರ್ಜೆಗೇರಿಸಲು ಮತ್ತು ಮೂಲ ಸೌಕರ್ಯಗಳನ್ನು ಕಲ್ಪಿಸಲು ನಾವು ಬಜೆಟ್‌ನಲ್ಲಿ ಹಣ ಒದಗಿಸಿದ್ದೇವೆ. ಈ ವರ್ಷದಲ್ಲಿ ನನ್ನ ಸರ್ಕಾರದ ಹೊಸ ಉಪಕ್ರಮ ಎಂದರೆ ಬೆಂಗಳೂರು ನ್ಯಾನೋ ಮೇಳ ನಡೆಸುವುದು.

58. ನನ್ನ ಸರ್ಕಾರವು ಸಾರ್ವಜನಿಕರ ಕುಂದುಕೊರತೆಗಳ ನಿವಾರಣೆಗಾಗಿ ಜನತಾ ಸಂದರ್ಶನದ ಕಾರ್ಯಕ್ರಮವನ್ನು ಪ್ರತಿ ವಾರ ಮಾಡುವುದರಿಂದ ಈ

ಸರ್ಕಾರ ಜನಗಳ ಬೇಡಿಕೆಗಳಿಗೆ ಸ್ಪಂದಿಸುತ್ತದೆ ಹಾಗೂ ಪರಿಹಾರವನ್ನು ಒದಗಿಸುತ್ತದೆ.

59. ನನ್ನ ಸರ್ಕಾರವು ಇ-ಆಡಳಿತವನ್ನು ಹೆಚ್ಚು ಗಂಭೀರವಾಗಿ ಕೈಗೆತ್ತಿಕೊಂಡಿದ್ದು ಹಲವಾರು ಹೊಸ ಯೋಜನೆಗಳನ್ನು ಪ್ರಾರಂಭಿಸಿದೆ ಎಂದು ನಿಮಗೆ ತಿಳಿಸಲು ನನಗೆ ಸಂತೋಷವೆನಿಸುತ್ತದೆ. ಅವುಗಳಲ್ಲಿ ಭೂಮಿ, ಬೆಂಗಳೂರು ಒನ್, ಖಜಾನೆ, ಕಾವೇರಿ ಇವು ಹೆಸರಿಸಬಹುದಾದ ಕೆಲವು ಯೋಜನೆಗಳಾಗಿದ್ದು, ರಾಜ್ಯಕ್ಕೆ ಕೀರ್ತಿ ತಂದಿವೆ. ಈಗ, ನೆಮ್ಮದಿ ಕಾರ್ಯಕ್ರಮದಡಿ ಹೋಬಳಿ ಹಂತದಲ್ಲಿ 800 ಟೆಲಿ ಕೇಂದ್ರಗಳನ್ನು ಸ್ಥಾಪಿಸುವ ಮೂಲಕ, ನನ್ನ ಸರ್ಕಾರವು ಆಡಳಿತವನ್ನು ನಾಗರೀಕರ ಮನೆ ಬಾಗಿಲಿಗೆ ಒಯ್ಯುತ್ತಿದೆ. ವಿದ್ಯುನ್ಮಾನ-ಸಂಗ್ರಹಣಾ ವೇದಿಕೆಯನ್ನು ಕೆಲವು ಪ್ರಮುಖ ಇಲಾಖೆಗಳಲ್ಲಿ ಸದ್ಯದಲ್ಲೇ ಸ್ಥಾಪಿಸಲಾಗುವುದು. ವ್ಯಾಪಕ ಪ್ರದೇಶ ಜಾಲದ ಮೂಲಕ ತಾಲ್ಲೂಕು ಹಂತದವರೆಗೂ ಆದಷ್ಟು ಬೇಗನೆ ಸಂಪರ್ಕ ಸಾಧಿಸಲಾಗುವುದು.

60. ಈ ವರ್ಷ ಸಕಾಲದಲ್ಲಿ ಸಾಕಷ್ಟು ಮಳೆಯಾಗಿ ರಾಜ್ಯದಲ್ಲಿ ಸಮೃದ್ಧಿ ನೆಲೆಸುತ್ತದೆಂದು ಆಶಿಸುತ್ತೇನೆ. ಉತ್ತಮ, ದಕ್ಷ ಹಾಗೂ ಜನಸ್ಪಂದನ ಆಡಳಿತ ನೀಡುವುದರ ಮೂಲಕ ಕನ್ನಡದ ಜನತೆ ಉತ್ತಮ ಮಟ್ಟದ ಬದುಕನ್ನು ನಡೆಸುವಂತಾಗಲು ನನ್ನ ಸರ್ಕಾರ ಶ್ರಮಿಸುತ್ತದೆ.

ಜೈ ಹಿಂದ್, ಜೈ ಕರ್ನಾಟಕ

ಉಪಾಧ್ಯಕ್ಷರು: ಮಂಡಿಸಲಾಯಿತು. ಈಗ ಸದನವನ್ನು ಒಂದನೇ ಫೆಬ್ರವರಿ 2007ನೇ ಗುರುವಾರ ಬೆಳಿಗ್ಗೆ 11.00 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವು ಮಧ್ಯಾಹ್ನ 12 ಗಂಟೆ 36 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನಃ 1ನೇ ಫೆಬ್ರವರಿ 2007ರ ಗುರುವಾರ ಬೆಳಿಗ್ಗೆ 11.00 ಗಂಟೆಗೆ ಸೇರಲು ನಿಶ್ಚಯಿಸಿತು)